
# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




ಸಂಪುಟ : 37 ಸಂಚಿಕೆ : 2 ಮನ್ಮಥ–ಸಿಂಹ ಕಲಿಯುಗಾಬ್ದ 5117 1–9–2015 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ಅನ್ನದಾತನ ಆತ್ಮಹತ್ಯೆ – ಒಂದು ಚಿಂತನೆ

ಪ್ರಪಂಚಕ್ಕೆ ಅನ್ನ ಕೊಟ್ಟು ಇತರರ ಸುಖಕರ ಬದುಕಿಗೆ ಕಾರಣವಾದ ರೈತರು ತಾವೇ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ನಮ್ಮ ರಾಜ್ಯದಲ್ಲಿ ನಡೆಯುತ್ತಿರುವ ದುಃಖಕರ ಬೆಳವಣಿಗೆ. ಇದು ಕೇವಲ ರೈತರಿಗೆ ಸಂಬಂಧಿಸಿದ ವಿಷಯವಲ್ಲ. ಆಳಿರಬಹುದು, ಅರಸನಿರಬಹುದು – ಎಲ್ಲರೂ ಅನ್ನ ತಿನ್ನುವವರೇ. ಆದ್ದರಿಂದ ಅನ್ನದಾತನ ಬಗ್ಗೆ ಯೋಚಿಸುವುದು ಪ್ರತಿಯೊಬ್ಬನ ಜವಾಬ್ದಾರಿಯೂ ಹೌದು.

ಕಳೆದ ಎರಡು ತಿಂಗಳಿಂದ ನಮ್ಮ ರಾಜ್ಯದಲ್ಲಿ ನಡೆದ ರೈತರ ಆತ್ಮಹತ್ಯೆಗಳ ಸಂಖ್ಯೆ 300ಕ್ಕೂ ಹೆಚ್ಚು ಎನ್ನುವುದು ಬಹಳ ಗಂಭೀರ ವಿಚಾರ. ಕಾರಣಗಳನ್ನು ಹುಡುಕುತ್ತಾ ಹೊರಟಾಗ ಕೆಲವೊಂದು ವಿಷಯಗಳು ಗೋಚರಿಸುತ್ತವೆ.

- ಖಾಸಗಿ ಸಂಸ್ಥೆಗಳಿಂದ ಹೆಚ್ಚಿನ ಬಡ್ಡಿದರಕ್ಕೆ ತೆಗೆದುಕೊಂಡ ಸಾಲದಿಂದಾಗಿ ಬಡ್ಡಿ–ಚಕ್ರಬಡ್ಡಿಗಳ ಸುಳಿಗೆ ಸಿಕ್ಕಿಹಾಕಿಕೊಂಡಿರುವುದು.
- ಸಣ್ಣ ಹಿಡುವಳಿದಾರರಿಗೂ ಬ್ಯಾಂಕ್‌ಗಳು ಟ್ರ್ಯಾಕ್ಟರ್ ಸಾಲ ನೀಡಿರುವುದು.
- ಬೆಳೆ ಯೋಜನೆ ಮತ್ತು ನಿರ್ವಹಣೆಯಲ್ಲಿ ಸುಧಾರಿತ ಪದ್ಧತಿಗಳ ಬಗ್ಗೆ ಸರಿಯಾದ ಮಾಹಿತಿ ರೈತರಿಗೆ ಇಲ್ಲದಿರುವುದು.
- ಕೆಲವು ರೈತರು ಕೃಷಿಗಾಗಿ ತೆಗೆದುಕೊಂಡ ಸಾಲವನ್ನು ಮದುವೆ–ಮುಂಜಿ ಮೊದಲಾದ ಕಾರ್ಯಕ್ರಮಗಳಿಗೆ ಉಪಯೋಗಿಸುವುದು.
- ದುಶ್ಚಟಗಳಿಗಾಗಿ ಹಣ ವ್ಯಯ ಮಾಡುವುದರಿಂದ ಹೆಚ್ಚುತ್ತಿರುವ ಸಾಲ.
- ಪಾರಂಪರಿಕವಾಗಿ ಬಂದ ಸಾವಯವ ಪದ್ಧತಿಯನ್ನು ಕೈಬಿಟ್ಟು ಹೆಚ್ಚು ಬಂಡವಾಳ ಬೇಕಾದ ರಾಸಾಯನಿಕ ಕೃಷಿಯನ್ನು ಅಪ್ಪಿಕೊಂಡಿರುವುದು. ಬೀಜ, ಗೊಬ್ಬರ, ಟ್ರ್ಯಾಕ್ಟರ್ ಎಲ್ಲದಕ್ಕೂ ಹಣ ಅಗತ್ಯ. ಮೊದಲು ಎತ್ತು–ಕೋಣಗಳಿಂದ ಉಳುಮೆಯೂ ಆಗುತ್ತಿತ್ತು, ಗೊಬ್ಬರವೂ ಸಿಗುತ್ತಿತ್ತು. ರಾಸಾಯನಿಕ ಕೃಷಿಯಿಂದಾಗಿ ಪ್ರತಿಯೊಂದಕ್ಕೂ ಹಣ ನೀಡುವ ಪರಿಸ್ಥಿತಿ ನಿರ್ಮಾಣವಾಗಿದೆ.
- ನೀರಿಂಗಿಸುವ ವಿಧಾನಗಳನ್ನು ಅಳವಡಿಸಿಕೊಳ್ಳದಿರುವುದರಿಂದ ನೀರಿಲ್ಲದೇ ಬೆಳೆ ವೈಫಲ್ಯ. ಕೃಷಿ ಭೂಮಿಯಿದ್ದರೂ ಕೃಷಿ ಮಾಡಲಾಗದ ಪರಿಸ್ಥಿತಿ. ಕೊಳವೆ ಬಾವಿಗಳು ವಿಫಲವಾಗಿ, ಒಂದರ ಮೇಲೊಂದು ಹೊಸದನ್ನು ಕೊರೆಸಲು ಹೊಸ ಸಾಲ.
- ಸಾಲ ಸ್ವಲ್ಪವೇ ಇದ್ದರೂ ಬ್ಯಾಂಕಿನವರು, ಸಾಲ ಕೊಟ್ಟವರೂ ಮನೆ ಮುಂದೆ ಬಂದು ಆಸ್ತಿ ಜಪ್ತಿ ಮಾಡುವ ಬೆದರಿಕೆ ಹಾಕುವುದರಿಂದ ಮರ್ಯಾದೆಗೆ ಅಂಜಿ ಜೀವ ಕಳೆದುಕೊಳ್ಳುವವರ ಸಂಖ್ಯೆಯೂ ಗಣನೀಯವಾಗಿದೆ.

ಹೀಗೆ ಇನ್ನೂ ಅನೇಕ ಕಾರಣಗಳಿಂದ ರೈತರು ಸಾವಿಗೆ ಶರಣಾಗುತ್ತಿರುವುದು ಸಾಮಾನ್ಯವಾಗಿ ಕಂಡುಬರುವ ಅಂಶಗಳು. ಎಲ್ಲ ಸಮಸ್ಯೆಗಳಿಗೂ ಸಾವೇ ಪರಿಹಾರವಲ್ಲವಷ್ಟೇ. ಹಾಗಾಗಿ, ಇದಕ್ಕೆ ಪರ್ಯಾಯ ಮಾರ್ಗಗಳೇನು ಎನ್ನುವುದನ್ನು ಹುಡುಕಬೇಕಾದದ್ದು ನಮ್ಮೆಲ್ಲರ ಕರ್ತವ್ಯ.

## ರೈತರಲ್ಲದವರೇನು ಮಾಡಬಹುದು?

- ರೈತರು ಬೆಳೆದ ಪದಾರ್ಥಗಳಿಗೆ ಮಾರುಕಟ್ಟೆ ಒದಗಿಸುವುದು. ಅಂದರೆ, ಕೂಲ್ ಡ್ರಿಂಕ್ಸ್ ಬದಲು ಮಜ್ಜಿಗೆ, ಎಳನೀರು ಬಳಕೆ. ಹೆಚ್ಚು ಹತ್ತಿ ಬಟ್ಟೆಯ ಬಳಕೆ. ಸಕ್ಕರೆಯ ಬದಲು ಬೆಲ್ಲದ ಬಳಕೆ. ಇದರಿಂದ ಹಣ ಕಾರ್ಖಾನೆಯ ಬದಲಿಗೆ ನೇರವಾಗಿ ರೈತರಿಗೆ ತಲುಪುತ್ತದೆ.
- ರೈತರ ಬಳಿ ಹೆಚ್ಚು ಚೌಕಾಶಿ ಬೇಡ. ಸಾಧ್ಯವಿರುವಲ್ಲೆಲ್ಲಾ, ಸಂತೆಗಳಲ್ಲಿ ನೇರ ರೈತರಿಂದಲೇ ಖರೀದಿ.
- ನಮ್ಮ ಸಮೀಪದ ಹಳ್ಳಿಗೆ ಹೋಗಿ ರೈತರ ಪರಿಚಯ ಮಾಡಿಕೊಳ್ಳುವುದು. ಆಗಾಗ ಅವರಿಗೆ ಫೋನ್ ಮಾಡುವುದು. ಅವರ ಕಷ್ಟ ಸುಖ ಅರ್ಥಮಾಡಿಕೊಳ್ಳುವುದು. ನಮಗೆ ಕೃಷಿಯ ಬಗ್ಗೆ ಜ್ಞಾನವಿದ್ದರೆ, ಅವರಿಗೆ ಬೇಕಾದ ಮಾಹಿತಿ ನೀಡುವುದು.
- ಸಾಲದ ಸಮಸ್ಯೆಯಲ್ಲಿ ಸಿಕ್ಕಿರುವ ರೈತರ ಪರಿಚಯವಿದ್ದಲ್ಲಿ, ಅವರೊಂದಿಗೆ ಸಮಾಲೋಚಿಸಿ ಧೈರ್ಯ ತುಂಬಬಹುದು. ಸಾಲ ಕೊಟ್ಟವರ ಬಳಿ ಮಾತನಾಡಿ, ಸಾಲ ವಾಪಸಾತಿಗೆ ಕಾಲಾವಕಾಶ ಕೇಳುವಲ್ಲಿ ಸಹಕರಿಸಬಹುದು.
- ಆರ್ಥಿಕವಾಗಿ ಸಂಕಷ್ಟದಲ್ಲಿರುವ ರೈತರ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವುದು ಮತ್ತು ನಮ್ಮ ಸ್ನೇಹಿತರೂ ಹೀಗೆ ಮಾಡುವಂತೆ ಪ್ರೇರಣೆ ನೀಡುವುದು.
- ನೀರಿಂಗಿಸುವ ವಿಧಾನಗಳ ಬಗ್ಗೆ ಅಂತರ್ಜಾಲದಲ್ಲಿ ಅನೇಕ ವಿಡಿಯೋಗಳಿವೆ. ಅನೇಕ ತಜ್ಞರಿದ್ದಾರೆ. ನೀರಿಂಗಿಸುವ ವಿಧಾನಗಳ ಮಾಹಿತಿ, ತಜ್ಞರಿಂದ ಮಾರ್ಗದರ್ಶನ ರೈತರಿಗೆ ಸಿಗುವಂತೆ ವ್ಯವಸ್ಥೆ ಮಾಡುವುದು.
- ಹಳ್ಳಿಗಳನ್ನು ದುಶ್ಚಟಮುಕ್ತ ಮಾಡಲು ನಾವೇನು ಮಾಡಬಹುದು ಎಂಬ ಬಗ್ಗೆಯೂ ಎಲ್ಲರೂ ಚಿಂತಿಸಬೇಕಾಗಿದೆ. ಉದಾಹರಣೆಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ನಡೆದ ಮದ್ಯವರ್ಜನ ಶಿಬಿರ ಉತ್ತಮ ಫಲಿತಾಂಶ ನೀಡಿದ ಅನೇಕ ಉದಾಹರಣೆಗಳಿವೆ.

ರೈತರ ಆತ್ಮಹತ್ಯೆಯೆನ್ನುವುದು ಕೇವಲ ಒಂದು ವೃತ್ತಿಗೆ ಸಂಬಂಧಿಸಿದ ವಿಷಯವಲ್ಲ. ಒಟ್ಟು ನಮ್ಮ ವ್ಯವಸ್ಥೆಯ ವೈಫಲ್ಯದ ಪರಿಣಾಮ ಇದು. ಹಾಗಾಗಿ, ಇದರ ಬಗ್ಗೆ ಎಲ್ಲರೂ ಗಂಭೀರವಾಗಿ ಯೋಚಿಸಿ ಕಾರ್ಯಪ್ರವೃತ್ತರಾಗಬೇಕಾದದ್ದು ಇಂದಿನ ತುರ್ತು ಅಗತ್ಯ.



## ರೈತರೇನು ಮಾಡಬಹುದು?

- ತಮ್ಮ ಸಮಸ್ಯೆಗಳನ್ನು ಯಾರಾದರೂ ಆತ್ಮೀಯರಲ್ಲಿ ಹೇಳಿಕೊಳ್ಳುವುದರಿಂದ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಸಾವೇ ಪರಿಹಾರ ಎಂದುಕೊಳ್ಳುವ ಹೊತ್ತಿನಲ್ಲಿ ಬೆಳಕೊಂದು ಗೋಚರಿಸುವ ಸಾಧ್ಯತೆಯಿರುತ್ತದೆ. ನಮ್ಮ ಸಮಸ್ಯೆಗೆ ಪರಿಹಾರ ಅವರಿಂದ ದೊರೆಯಬಹುದು.
- ದಿನಪತ್ರಿಕೆಗಳಲ್ಲಿ ಬರುವ ಕೃಷಿ ಪುರಣಿಗಳಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿದ ರೈತರ ಯಶೋಗಾಥೆಗಳು ಬರುತ್ತವೆ. ಅವುಗಳನ್ನು ಓದಿ, ಅವರೊಡನೆ ಮಾತನಾಡಿ, ಅವರ ಜಮೀನಿಗೆ ಹೋಗಿ ನೋಡಿಕೊಂಡು ಬರಬಹುದು. ಕೆಲವು ಪತ್ರಿಕೆಗಳಲ್ಲಿ ಕೃಷಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸುವ ತಜ್ಞರಿದ್ದಾರೆ. ಅವರ ಅಂಕಣಕ್ಕೆ ಪ್ರಶ್ನೆಗಳನ್ನು ಕಳುಹಿಸಬಹುದು.
- ಕೃಷಿ ಇಲಾಖೆಯ ಕಚೇರಿಗೆ ಹೋಗಿ ರೈತರಿಗೆ ಸಿಗುವ ಸೌಲಭ್ಯಗಳ ಬಗ್ಗೆ, ಯಾವ ಬೆಳೆಗೆ ಸಹಾಯಧನವಿದೆ ಮತ್ತು ನಮ್ಮ ಮಣ್ಣಿಗೆ ಯಾವ ಬೆಳೆ ಸೂಕ್ತ ಎಂಬ ಬಗ್ಗೆ ಸಲಹೆ ಪಡೆಯಬಹುದು. ಮಣ್ಣು ಪರೀಕ್ಷೆ ಮಾಡಿಸಿ, ಅದರಂತೆ ನಿರ್ಧಾರ ತೆಗೆದುಕೊಳ್ಳಬಹುದು.
- ಸಾವಯವ ಕೃಷಿಗೆ ಮರಳುವ ಬಗ್ಗೆ ಯೋಚಿಸುವುದು ಉತ್ತಮ. ಇದರಿಂದ ಸಾಲದ ಸುಳಿಗೆ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ ಕಡಿಮೆ.
- ಮಳೆ ಬಂದಾಗ ನೀರಿಂಗಿಸಿ, ವಿಫಲವಾದ ಕೊಳವೆ ಬಾವಿಗಳಲ್ಲಿ ನೀರು ಬರಿಸಿದ ರೈತರು ಅನೇಕರಿದ್ದಾರೆ. ಹರಿಯುವ ನೀರನ್ನು ಒಡ್ಡು ಕಟ್ಟುವ ಮೂಲಕ ಅಡ್ಡಗಟ್ಟಿದರೂ ಒಳ್ಳೆಯ ಪರಿಣಾಮ ಸಾಧ್ಯ.

**ಯೋಚಿಸಿ:** ಒಂದು ಚಾಕಲೇಟು ತಯಾರಿಸುವ ಕಂಪೆನಿಯೂ, ತಮ್ಮ ಖರ್ಚು ಇಷ್ಟು, ನಮ್ಮ ಲಾಭ ಇಷ್ಟು. ಆದ್ದರಿಂದ ಚಾಕಲೇಟಿನ ಬೆಲೆ ಇಷ್ಟು ಎಂದು ನಿರ್ಧರಿಸಿ ಆ ಬೆಲೆಗೇ ಮಾರುತ್ತದೆ. ನಾವೆಲ್ಲರೂ ಮರುಮಾತಿಲ್ಲದೇ ಆ ಬೆಲೆ ಕೊಟ್ಟು ಕೊಂಡುಕೊಳ್ಳುತ್ತೇವೆ. ಆದರೆ, ರೈತ ತಾನು ಬೆಳೆದ ಉತ್ಪನ್ನದ ಖರ್ಚು ಇಷ್ಟು, ತನ್ನ ಲಾಭ ಇಷ್ಟು ಎಂದು ಹೇಳಿ ತನ್ನ ಬೆಳೆಯ ಬೆಲೆಯನ್ನು ತಾನೇ ನಿರ್ಧರಿಸುವ ಹಕ್ಕು ಇಲ್ಲ. ಯಾಕೆ?

## ಕಜಕಿಸ್ಥಾನದಲ್ಲಿ ಹಜ್ ಯಾತ್ರೆಗೆ ನಿಷೇಧ

ಈ ಹಿಂದೆ ಸೋವಿಯತ್ ಒಕ್ಕೂಟದ ಭಾಗವಾಗಿದ್ದ ಮಧ್ಯ ಏಷ್ಯಾದಲ್ಲಿರುವ ಕಜಕಿಸ್ಥಾನ ಸರ್ಕಾರವು 35 ವರ್ಷ ಕೆಳಗಿನ ಯುವಕರು ಹಜ್ ಯಾತ್ರೆಗೆ ತೆರಳುವುದನ್ನು ನಿಷೇಧಿಸಿ ಆದೇಶ ಹೊರಡಿಸಿದೆ. ಹಜ್ ಯಾತ್ರೆಗೆ ತೆರಳಿದ ಅನೇಕ ಯುವಕರು ಇಸಿಸ್ (ISIS) ಉಗ್ರರೆಡೆಗೆ ಆಕರ್ಷಿತರಾಗುತ್ತಿರುವುದನ್ನು ಮನಗಂಡ ಸರ್ಕಾರ ಮುಂಜಾಗ್ರತಾ ಕ್ರಮವಾಗಿ ಈ ನಿರ್ಧಾರಕ್ಕೆ ಬಂದಿದೆ ಎಂದು ಕಜಕಿಸ್ತಾನ ಸರ್ಕಾರ ಸ್ಪಷ್ಟಪಡಿಸಿದೆ. ಈ ನಿರ್ಧಾರದ ಹಿಂದೆ ರಷ್ಯಾದ ಒತ್ತಡವೂ ಇದೆ ಎನ್ನಲಾಗಿದೆ. ಜೊತೆಗೆ ಚಿಕ್ಕ ಮಕ್ಕಳು ಬುರ್ಕಾ ಧರಿಸುವುದನ್ನು ಮತ್ತು ಯುವಕರು ಮಸೀದಿಗೆ ಹೋಗುವುದನ್ನು ನಿರ್ಬಂಧಿಸಿದೆ. ಹೊರದೇಶದಲ್ಲಿ ಶಿಕ್ಷಣ ಪಡೆಯುತ್ತಿರುವವರು ಉಗ್ರರಿಂದ ಆಕರ್ಷಣೆಗೊಳಗಾಗುವುದನ್ನು ತಡೆಗಟ್ಟಲು ಅವರನ್ನು ವಾಪಸ್ ಕಜಕಿಸ್ತಾನಕ್ಕೆ ಕರೆಸಿಕೊಳ್ಳಲು ನಿರ್ಧರಿಸಿದೆ. ಮಧ್ಯ ಏಷ್ಯಾದಿಂದ 2000 ದಿಂದ 4000 ಯುವಕರು ISIS ಸೇರಿದ್ದಾರೆ. ಇದರಿಂದ ಕಂಗಾಲಾಗಿರುವ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ.

**ಅಂದಹಾಗೆ...**

"ಕೃಷಿಗೆ ಸಿಕ್ಕ ಈ ವರದಾನವನ್ನು ದಿಢೀರ್ ಲಾಭಕ್ಕಾಗಿ ಬಳಸಲು ಹೋದರೆ ಬರಗಾಲವೇ ಬಂದೀತು. ಭೂಮಿ ಮತ್ತೆಂದೂ ರಿಪೇರಿ ಮಾಡಲಾಗದಷ್ಟು ಸವುಳಾದೀತು. ಸಾಂಪ್ರದಾಯಿಕ ಕೃಷಿಯಿಂದಾಗಿ ಸಾವಿರಾರು ವರ್ಷಗಳಿಂದ ಶೇಖರವಾಗಿರುವ ಅಂತರ್ಜಲ ಖಜಾನೆಯೆಲ್ಲ ಖಾಲಿಯಾದೀತು. ರಸಗೊಬ್ಬರಗಳ ಬಳಕೆಯ ಜೊತೆಗೆ ಕೀಟನಾಶಕ, ಶಿಲೀಂಧ್ರನಾಶಕ ಮತ್ತು ಕಳೆನಾಶಕ ದ್ರವ್ಯಗಳನ್ನು ಬೇಕಾಬಿಟ್ಟಿ ಬಳಸಿದರೆ ಕ್ಯಾನ್ಸರ್ ಮತ್ತು ಇನ್ನಿತರ ಅನೇಕ ರೋಗಗಳಿಗೆ ರೈತರೇ ಬಲಿಯಾಗಬಹುದು. ಕೃಷಿಕರಿಗೆ ಸರಿಯಾದ ತರಬೇತಿ ಕೊಡುವ ವ್ಯವಸ್ಥೆಯನ್ನು ಜಾರಿಗೆ ತರದೇ ಇದ್ದರೆ ದೂರ ಭವಿಷ್ಯದಲ್ಲಿ ಕೃಷಿಕ್ರಾಂತಿಯ ಬದಲು ದುರಂತವೇ ಬೆನ್ನಟ್ಟಿ ಬಂದೀತು"

– ಕೃಷಿ ವಿಜ್ಞಾನಿ ಪ್ರೊ. ಎಮ್.ಎಸ್. ಸ್ವಾಮಿನಾಥನ್, ಭಾರತದ ಹಸಿರು ಕ್ರಾಂತಿಯ ಹರಿಕಾರ
1968ರಲ್ಲಿ ವಾರಾಣಸಿಯಲ್ಲಿ ನಡೆದ ಭಾರತೀಯ ವಿಜ್ಞಾನ ಕಾಂಗ್ರೆಸ್‌ನ ಅಧ್ಯಕ್ಷ ಭಾಷಣದಲ್ಲಿ ಹೇಳಿದ ಮಾತು

# ನೇಪಾಳವನ್ನು ಹಿಂದೂರಾಷ್ಟ್ರವೆಂದು ಘೋಷಿಸಿ: ನೇಪಾಳಿ ಮುಸ್ಲಿಮರ ಒತ್ತಾಯ



ನೇಪಾಳದಲ್ಲಿ ಸಂವಿಧಾನ ರಚನೆ ಪ್ರಕ್ರಿಯೆಗೆ ಚಾಲನೆ ದೊರೆತಿದ್ದು, ಅಲ್ಲಿನ ಮುಸ್ಲಿಮರು ನೇಪಾಳವನ್ನು ಹಿಂದೂರಾಷ್ಟ್ರವನ್ನಾಗಿ ಘೋಷಿಸಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಸೆಕ್ಯುಲರ್ ಸಂವಿಧಾನಕ್ಕಿಂತಲೂ ಹಿಂದೂರಾಷ್ಟ್ರದ ಸಂವಿಧಾನದಲ್ಲೇ ತಾವು ಸುರಕ್ಷಿತವಾಗಿರುತ್ತೇವೆ ಎಂದು ನೇಪಾಳದಲ್ಲಿರುವ ಮುಸ್ಲಿಮರು ಹೇಳಿದ್ದಾರೆ.

ನೇಪಾಳದ ಹಿಂದೂ ರಾಷ್ಟ್ರದ ಗುರುತನ್ನು ಹಾಗೆಯೇ ಉಳಿಸಿಕೊಳ್ಳಬೇಕು. ಸೆಕ್ಯುಲರ್ ಸಂವಿಧಾನ ಜಾರಿಗೆ ಬರುವುದು ಬೇಡ ಎಂದು ಹೇಳಿರುವ ಮುಸ್ಲಿಮರು ನೇಪಾಳ ಹಿಂದೂರಾಷ್ಟ್ರವಾಗಬೇಕು ಎಂದು ಅಭಿಯಾನವನ್ನು ಪ್ರಾರಂಭಿಸಿದ್ದಾರೆ. ಇಸ್ಲಾಂಮತವನ್ನು ಕಾಪಾಡುವುದಕ್ಕೆ ಹಿಂದೂ ರಾಷ್ಟ್ರದಿಂದ ಮಾತ್ರ ಸಾಧ್ಯ. ಸ್ವಧರ್ಮವನ್ನು ಕಾಪಾಡುವುದಕ್ಕಾಗಿ ನೇಪಾಳವನ್ನು ಹಿಂದೂ ರಾಷ್ಟ್ರವನ್ನಾಗಿ ಘೋಷಿಸಬೇಕೆಂದು ಒತ್ತಾಯಿಸುತ್ತೇನೆ ಎಂದು ನೇಪಾಳದ ರಷ್ಟಿ ಮುಸ್ಲಿಂ ಸೊಸೈಟಿ ಅಧ್ಯಕ್ಷ ಅಮ್ಜದ್ ಅಲಿ ಹೇಳಿದ್ದಾರೆ. ಅಲ್ಲದೇ ಇದಕ್ಕಾಗಿ ಪ್ರತಿಭಟನೆಯನ್ನು ನಡೆಸುತ್ತಿದ್ದಾರೆ.

ಕಮ್ಯುನಿಸ್ಟ್ ಪಾರ್ಟಿ ಆಫ್ ನೇಪಾಳ್(ಸಿಪಿಎನ್-ಯುಎಂಎಲ್)ನ ಸದಸ್ಯೆಯಾಗಿರುವ ಅನಾರ್‌ಕಲಿ ಮಿಯಾ ಸಹ ನೇಪಾಳವನ್ನು ಹಿಂದೂ ರಾಷ್ಟ್ರವನ್ನಾಗಿ ಘೋಷಿಸಬೇಕೆಂಬ ಒತ್ತಾಯಕ್ಕೆ ಬೆಂಬಲ ನೀಡಿದ್ದು, ಕ್ರೈಸ್ತಮತವನ್ನು ಅನುಸರಿಸುವಂತೆ ಮಿಷನರಿಗಳು ಒತ್ತಾಯಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ನೇಪಾಳವೇನಾದರೂ 'ಸೆಕ್ಯುಲರ್ ಸಂವಿಧಾನ'ವನ್ನು ಅಳವಡಿಸಿಕೊಂಡಲ್ಲಿ ಮುಂದಿನ ದಿನಗಳಲ್ಲಿ ಬಹುದೊಡ್ಡ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂದು ಮಿಯಾ ತಿಳಿಸಿದ್ದಾರೆ. ಇದಕ್ಕೆ ಮುಸ್ಲಿಂ ಮುಕ್ತಿ ಮೋರ್ಚಾದ ಸಹ ಸಂಸ್ಥೆ ಯುಸಿಪಿಎನ್ (ಮಾವೋವಾದಿ) ಕೂಡಾ ಬೆಂಬಲ ವ್ಯಕ್ತಪಡಿಸಿದೆ.

ನೇಪಾಳವನ್ನು ಸೆಕ್ಯುಲರ್ ದೇಶವನ್ನಾಗಿ ಮಾಡುವುದರ ಹಿಂದೆ ಹಿಂದೂ-ಮುಸ್ಲಿಮರ ನಡುವಿನ ಅಂತರವನ್ನು ಹೆಚ್ಚು ಮಾಡುವ ಹುನ್ನಾರವಿದೆ. ಆದ್ದರಿಂದ ನೇಪಾಳದ ಅತಿ ಪುರಾತನ ಪರಂಪರೆಯಾದ ಹಿಂದೂ ಧರ್ಮವನ್ನು ಹಾಗೆಯೇ ಉಳಿಸಿಕೊಂಡು ಹಿಂದೂ ರಾಷ್ಟ್ರವನ್ನಾಗಿಸಬೇಕಾದ ಅನಿವಾರ್ಯತೆ ಇದೆ ಎಂದು ರಾಷ್ಟ್ರವಾದಿ ಮುಸ್ಲಿಂ ಮಂಚ್ ನೇಪಾಳ್ ಗಂಜ್‌ನ ಅಧ್ಯಕ್ಷ ಬಾಬು ಖಾನ್ ಪಠಾಣ್ 'ಹಿಮಾಯಲನ್ ಟೈಮ್ಸ್'ಗೆ ಹೇಳಿಕೆ ನೀಡಿದ್ದಾರೆ. ಹಿಂದೂರಾಷ್ಟ್ರಕ್ಕಿಂತ ಸೆಕ್ಯುಲರ್ ರಾಷ್ಟ್ರದಲ್ಲಿ ಸುರಕ್ಷಿತವಾಗಿರಲು ಸಾಧ್ಯವಿಲ್ಲ. ನೇಪಾಳವನ್ನು ಹಿಂದೂರಾಷ್ಟ್ರ ಎಂದೇ ಗುರುತಿಸಬೇಕು, ಹಾಗಾದಲ್ಲಿ ಮಾತ್ರ ಎಲ್ಲರಿಗೂ ಭದ್ರತೆ ಇರಲಿದೆ. ನೇಪಾಳದಲ್ಲಿರುವ ಶೇ. 80 ಮುಸ್ಲಿಮರು ನೇಪಾಳವನ್ನು ಹಿಂದೂರಾಷ್ಟ್ರ ಎಂದು ಘೋಷಿಸುವುದನ್ನು ಬೆಂಬಲಿಸಿದ್ದಾರೆ ಎಂದು ಅವರು ಹೇಳಿದ್ದಾರೆ.

## ಆರೆಸ್ಸೆಸ್ ಶಾಖೆ: ಕಳೆದ ಐದು ವರ್ಷದಲ್ಲಿ ಶೇ.61ರಷ್ಟು ಏರಿಕೆ



ರಾಷ್ಟ್ರೀಯ ಸ್ವಯಂಸೇವಕ ಸಂಘದ ವ್ಯಕ್ತಿನಿರ್ಮಾಣದ ಉದ್ದೇಶದಿಂದ ನಡೆಸುವ ಶಾಖೆಗಳ ಸಂಖ್ಯೆ ಕಳೆದ ಐದು ವರ್ಷಗಳಲ್ಲಿ ಶೇ. 61ರಷ್ಟು ಏರಿಕೆ ಕಂಡಿದೆ ಎಂದು ಖ್ಯಾತ ಆಂಗ್ಲ ದಿನಪತ್ರಿಕೆ ಟೈಮ್ಸ್ ಆಫ್ ಇಂಡಿಯಾ ವರದಿ ಮಾಡಿದೆ.

ಖಾಕಿ ಚೆಡ್ಡಿ, ಬಿಳಿ ಶರ್ಟು, ಕಪ್ಪು ಬೂಟು, ಕೈಯಲ್ಲೊಂದು ದಂಡ... ಹೀಗೆ ಕಲ್ಪಿಸಿಕೊಂಡರೆ ಸಾಕು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಸದಸ್ಯರ ಶಿಸ್ತಿನ ಚಿತ್ರ ಕಣ್ಣಮುಂದೆ ಬರುತ್ತದೆ. ಗ್ರಾಮಗಳಿಂದ ಹಿಡಿದು ಪಟ್ಟಣದವರೆಗೆ ದೇಶದ ಮೂಲೆಮೂಲೆಯಲ್ಲೂ ಸಂಘದ ಶಾಖೆಗಳು ಬೆಳಿಗ್ಗೆ ಹಾಗೂ ಸಂಜೆ ನಡೆಯುತ್ತವೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಮುಖ ಚಟುವಟಿಕೆ ವ್ಯಕ್ತಿನಿರ್ಮಾಣ. ಈ ವ್ಯಕ್ತಿನಿರ್ಮಾಣ ಮಾಡುವ ಕೇಂದ್ರವೇ ಶಾಖೆ. ಈ ಸಲುವಾಗಿಯೇ ದೇಶದಾದ್ಯಂತ ದಿನನಿತ್ಯ, ವಾರಾಂತ್ಯ ಹಾಗೂ ತಿಂಗಳಿಗೊಮ್ಮೆ ಶಾಖೆಗಳನ್ನು ಆರೆಸ್ಸೆಸ್ ನಡೆಸುತ್ತಿದೆ. ಶಾರೀರಿಕ, ಮಾನಸಿಕ ಹಾಗೂ ಬೌದ್ಧಿಕ ವಿಕಾಸಕ್ಕೆ ಪೂರಕ ಚಟುವಟಿಕೆಗಳನ್ನು ಈ ಶಾಖೆಗಳಲ್ಲಿ ನೀಡಲಾಗುತ್ತದೆ. ಈಗ ದೇಶಾದ್ಯಂತ ಪ್ರತಿನಿತ್ಯ 51,335 ಆರೆಸ್ಸೆಸ್ ಶಾಖೆಗಳು ನಡೆಯುತ್ತಿವೆ. ಕಳೆದ ಐದು ವರ್ಷಗಳಲ್ಲಿ ಶಾಖೆಗಳ ಸಂಖ್ಯೆಯಲ್ಲಿ ಶೇ. 61ರಷ್ಟು ಏರಿಕೆ ಕಂಡಿದೆ. ದಿನನಿತ್ಯ ನಡೆಯುವ ಶಾಖೆಗಳ ಸಂಖ್ಯೆಯಲ್ಲಿ ಶೇ. 29ರಷ್ಟು ಹೆಚ್ಚಳ ಕಂಡುಬಂದಿದ್ದರೆ, ವಾರಾಂತ್ಯದಲ್ಲಿ ನಡೆಯುವ ಶಾಖೆಗಳ ಪ್ರಮಾಣದಲ್ಲಿ ಶೇ. 29ರಷ್ಟು ಏರಿಕೆಯಾಗಿದೆ. ಇನ್ನು ತಿಂಗಳಿಗೊಮ್ಮೆ ನಡೆಯುವ ಶಾಖೆಗಳ ಸಂಖ್ಯೆಯಲ್ಲೂ ಶೇ. 40ರಷ್ಟು ಹೆಚ್ಚಳವಾಗಿದೆ. ವಾಣಿಜ್ಯ ನಗರಿ ಮುಂಬಯಿಯಲ್ಲಿ ಆರೆಸ್ಸೆಸ್‌ಗೆ ಅದ್ಭುತ ಬೆಂಬಲ ಮುಂದುವರಿದಿದ್ದು, ಇಲ್ಲಿ ದಿನನಿತ್ಯ ಹಾಗೂ ವಾರಾಂತ್ಯ ನಡೆಯುವ ಶಾಖೆಗಳ ಸಂಖ್ಯೆಯಲ್ಲಿ ಕ್ರಮವಾಗಿ ಶೇ. 34 ಹಾಗೂ ಶೇ. 70ರಷ್ಟು ಏರಿಕೆಯಾಗಿದೆ. ಕಮ್ಯುನಿಸ್ಟರ ಬಿಗಿ ಹಿಡಿತವಿರುವ ಕೇರಳದಲ್ಲಿ ಅತ್ಯಧಿಕ 4,500 ಶಾಖೆಗಳು ನಡೆಯುತ್ತಿವೆ. ಇನ್ನು ಎಡಪಕ್ಷಗಳು ಹಾಗೂ ತೃಣಮೂಲ ಕಾಂಗ್ರೆಸ್ ಅಬ್ಬರವಿರುವ ಪಶ್ಚಿಮ ಬಂಗಾಳದಲ್ಲೂ ಆರೆಸ್ಸೆಸ್ ಪ್ರಬಲವಾಗಿದೆ. ದೇಶಾಭಿಮಾನವೊಂದೇ ಶಾಖೆಗಳ ಸಂಖ್ಯೆಯ ಏರಿಕೆಯ ಹಿಂದಿರುವ ಪ್ರೇರಕ ಶಕ್ತಿ ಎಂದು ಟೈಮ್ಸ್ ಆಫ್ ಇಂಡಿಯಾ ತನ್ನ ವರದಿಯಲ್ಲಿ ತಿಳಿಸಿದೆ.

## ಬಾಗಲಕೋಟೆಯಲ್ಲಿ 2 ದಿನಗಳ ಗ್ರಾಮ ವಿಕಾಸ ವರ್ಗ

ಸ್ವಾವಲಂಬೀ ಗ್ರಾಮಗಳ ಮೂಲಕ ಸಮರ್ಥಭಾರತ ಕಟ್ಟುವ ಮಹೋನ್ನತ ಧ್ಯೇಯದೊಂದಿಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಗ್ರಾಮ ವಿಕಾಸ ವಿಭಾಗವು ಉತ್ತರ ಕರ್ನಾಟಕ ಭಾಗದ ಜನರಿಗಾಗಿ ಆಯೋಜಿಸಿದ್ದ 2 ದಿನಗಳ 'ಗ್ರಾಮ ಸಂಗಮ'ವು ಬಾಗಲಕೋಟೆಯಲ್ಲಿ ಆಗಸ್ಟ್ 15ರಿಂದ 16ರ ತನಕ ಜರಗಿತು. ಕರ್ನಾಟಕ ಉತ್ತರ ಪ್ರಾಂತದ 338 ಗ್ರಾಮಗಳ 921 ಮಂದಿ(120 ಮಹಿಳೆಯರೂ ಸೇರಿದಂತೆ) ಆಯ್ದ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದರು.

'ಗ್ರಾಮ ವಿಕಾಸ ವರ್ಗ'ವನ್ನು ಹಿರಿಯ ಸಾವಯವ ಕೃಷಿಕ ಎಂಭತ್ತರ ಹರೆಯದ ತಮ್ಮಣ್ಣಪ್ಪ ಬುದ್ದಿ ಉದ್ಘಾಟಿಸಿದರು. ಆರೆಸ್ಸೆಸ್‌ನ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ್ ಮಂಗೇಶ್ ಭೇಂಡೆ, 'ಗ್ರಾಮ ವಿಕಾಸ' ಪ್ರಕಲ್ಪದ ಅಖಿಲ ಭಾರತೀಯ ಸಂಯೋಜಕ ಡಾ॥ ದಿನೇಶ್, ಉತ್ತರ ಪ್ರಾಂತ ಸಂಘಚಾಲಕ ಡಾ॥ ಖಗೇಶನ್ ಪಟ್ಟಣಶೆಟ್ಟಿ ಮುಂತಾದರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಗ್ರಾಮೀಣ ಭಾಗದ ಜನರಿಗೆ ಮಾರ್ಗದರ್ಶನ ಮಾಡಿದರು.




# ಸಾವಯವ ಹಳ್ಳಿಯಲಿ ಸ್ವಾವಲಂಬಿ ಬದುಕು

ನೆಲದ ಮಾತು

ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನ ಗಡಿ ಗ್ರಾಮ ಜಿ. ಬೊಪ್ಪನಹಳ್ಳಿ, ಸುಮಾರು 120 ಕುಟುಂಬಗಳಿರುವ ಈ ಗ್ರಾಮವೀಗ ಸಂಪೂರ್ಣ ಸಾವಯವಮಯ. ಏಕೆಂದರೆ ಈ ಗ್ರಾಮದ ತುಂಬಾ ಸಾವಯವ ಕೃಷಿಕರೇ ತುಂಬಿದ್ದಾರೆ. ವಾರ್ಷಿಕ 6,500 ಮಿಲಿಮೀಟರ್ ಮಳೆಯಾಗುವ ಈ ಗ್ರಾಮದಲ್ಲಿ ಖುಷ್ಕಿ ಪ್ರದೇಶ ಹೆಚ್ಚಿದೆ. ಗ್ರಾಮದ ಸುತ್ತಲೂ 40 ಸಣ್ಣ ಪ್ರಮಾಣದ ಕಟ್ಟೆಗಳಿದ್ದು, ಅವುಗಳನ್ನೂ ಸಾವಯವ ಕೃಷಿಗೆ ಬಳಸಿಕೊಳ್ಳಲಾಗುತ್ತಿದೆ.

ಕೃಷಿ ವೆಚ್ಚ ತಗ್ಗಿಸಲು, ಭೂಮಿಯ ಸತ್ವ ಉಳಿಸಿಕೊಳ್ಳಲು ಸಾವಯವ ಕೃಷಿಗೆ ಮೊರೆ ಹೋಗಿದ್ದರೆ, ಉಪಕಸುಬಾಗಿ ಹೈನುಗಾರಿಕೆ ಮಾಡುತ್ತಿದ್ದು, ಅದರ ವೆಚ್ಚ ತಗ್ಗಿಸಲು ಅಜೋಲಾ ಹಾಗೂ ಹಸಿರು ಮೇವು ಬೆಳೆಯುತ್ತಿದ್ದಾರೆ. ಸಿಲಿಂಡರ್ ವೆಚ್ಚ ಉಳಿಸಲು ಗೋಬರ್ ಗ್ಯಾಸ್ ಘಟಕ ಸ್ಥಾಪಿಸಿಕೊಂಡಿದ್ದು, ವಿದ್ಯುತ್ ಬಿಲ್ ಉಳಿಸಲು ಸೋಲಾರ್ ಅಳವಡಿಸಿದ್ದಾರೆ. ಹೀಗೆ ಒಂದೇ ಗ್ರಾಮದಲ್ಲಿ ಹಲವು ಬಗೆಯ ಪ್ರಯೋಗಗಳು ನಡೆಯುತ್ತಿವೆ. ಇದರಿಂದ ರೈತರು ಸಂತೃಪ್ತಿಯ ಜೀವನ ನಡೆಸುತ್ತಿದ್ದಾರೆ.

2010-11ನೇ ಸಾಲಿನಲ್ಲಿ ಕೃಷಿ ಇಲಾಖೆ ಹಾಗೂ ವಿಕಸನ ಸಂಸ್ಥೆಯ ಸಹಯೋಗದಲ್ಲಿ ಈ ಗ್ರಾಮವನ್ನು ಸಾವಯವ ಗ್ರಾಮಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಯಿತು. ಸರ್ ಎಂ. ವಿಶ್ವೇಶ್ವರಯ್ಯ ಸಾವಯವ ಕೃಷಿಕರ ಸಂಘದ ಮೂಲಕ ಗ್ರಾಮಸ್ಥರಿಗೆ ಸಾವಯವ ಕೃಷಿಯಿಂದ ಆಗುವ ಲಾಭಗಳ ಬಗ್ಗೆ ಮನವರಿಕೆ ಮಾಡಿಕೊಡಲಾಯಿತು. ಅದರ ಪರಿಣಾಮವಾಗಿಯೇ ಈ ಗ್ರಾಮವನ್ನೀಗ 'ಸಾವಯವ ಗ್ರಾಮ' ಎನ್ನಲಾಗುತ್ತಿದೆ. ಪ್ರತಿ ಮನೆಯಲ್ಲಿಯೂ ಗಂಜಲದ ತೊಟ್ಟಿ ನಿರ್ಮಿಸಲಾಗಿದೆ, ಅಜೋಲಾ ತೊಟ್ಟಿಗಳೂ ಇವೆ. ಯೋಜನೆ ಅನುಷ್ಠಾನಕ್ಕಾಗಿ 14.50 ಲಕ್ಷ ರೂ. ಸಹಾಯಧನ ಖರ್ಚು ಮಾಡಲಾಗಿದೆ.

ಹೊಲಗಳಲ್ಲಿ ಬದು ನಿರ್ಮಾಣ ಮಾಡಿಕೊಳ್ಳುವ ಮೂಲಕ ನೀರು ಅಲ್ಲಿಯೇ ಇಂಗುವಂತೆ ಮಾಡಲಾಗಿದೆ. ಹೆಚ್ಚಿನ ನೀರು ಅಲ್ಲಿರುವ ಹಳ್ಳ ಸೇರುತ್ತದೆ. ಅದಕ್ಕೂ ಚೆಕ್ ಡ್ಯಾಂ ನಿರ್ಮಿಸಲಾಗಿದ್ದು, ಅದರಿಂದ 120 ಎಕರೆ ಪ್ರದೇಶದಲ್ಲಿ ರಾಜಮುಡಿ, ಪುಟ್ಟುಭತ್ತ ಬೆಳೆಯಲಾಗುತ್ತಿದೆ. ಗ್ರಾಮದಲ್ಲಿ ಕೆಲವರು ಗೋಬರ್ ಗ್ಯಾಸ್ ಘಟಕಗಳನ್ನು ಅಳವಡಿಸಿಕೊಂಡಿದ್ದಾರೆ. ಆ ಮೂಲಕ ಸಿಲಿಂಡರ್ ಖರೀದಿ ನಿಲ್ಲಿಸಿದ್ದಾರೆ. ಮನೆಗೆ ಸಾಕಾಗುವಷ್ಟು ಗ್ಯಾಸ್ ಅನ್ನು ಅಲ್ಲಿಯೇ ಉತ್ಪಾದಿಸುತ್ತಿದ್ದಾರೆ. ಗ್ಯಾಸ್ ಉತ್ಪಾದನೆ ನಂತರ ಬರುವ ಸೆಗಣಿಯ ಸ್ಲರಿಯನ್ನು ಹೊಲಕ್ಕೆ ಗೊಬ್ಬರವಾಗಿ ಬಳಸಿಕೊಳ್ಳುತ್ತಾರೆ.

**ಹಲವು ಘಟಕ :** ಗ್ರಾಮದಲ್ಲಿ 40 ಎರೆಹುಳು ಗೊಬ್ಬರ ಘಟಕಗಳಿದ್ದರೆ, 10 ಜಪಾನ್ ಮಾದರಿ ಗೊಬ್ಬರ ಘಟಕಗಳಿವೆ. ಎರೆಹುಳು ಗೊಬ್ಬರದ ಘಟಕಗಳನ್ನು ಎರಡು ವಿಭಾಗಗಳನ್ನಾಗಿ ಮಾಡಿಕೊಳ್ಳಲಾಗಿದ್ದು, ಒಂದರ ಗೊಬ್ಬರ ಉತ್ಪಾದನೆ ಮುಗಿಯುವ ವೇಳೆಗೆ ಇನ್ನೊಂದು ವಿಭಾಗದಲ್ಲಿ ಗೊಬ್ಬರ ಉತ್ಪಾದಿಸುತ್ತಾರೆ.

ಜೀವಾಮೃತ ತಯಾರಿಕೆಯ 94, ಬಯೋಡೈಜೆಸ್ಟರ್‌ನ ನಾಲ್ಕು, ಸಸ್ಯಜನ್ಯ ಕ್ರೀಟನಾಶಕ ಡ್ರಂ ಘಟಕಗಳು 100 ಇವೆ. ಎರೆಹುಳು ಗೊಬ್ಬರ ಘಟಕದಲ್ಲಿ ತ್ಯಾಜ್ಯ ಹಾಗೂ ಸೆಗಣಿ ಹಾಕಲಾಗುತ್ತದೆ. ಜಪಾನ್ ಮಾದರಿ ಘಟಕದಲ್ಲಿ ಪ್ಲಾಸ್ಟಿಕ್ ಹೊರತುಪಡಿಸಿ ತ್ಯಾಜ್ಯ ವಸ್ತುಗಳು, ಸೆಗಣಿ, ಗಂಜಲ ಎಲ್ಲವನ್ನೂ ಹಾಕಲಾಗುತ್ತದೆ. ಹಸುಗಳ ಸಂಖ್ಯೆ ಹೆಚ್ಚಾದಮೇಲೆ ಗೊಬ್ಬರದ ಪ್ರಮಾಣ ಹೆಚ್ಚಾಗಿ ಕೆಲವರು ಪ್ರತಿ ಕೆ.ಜಿ.ಗೆ 6 ರೂಪಾಯಿಯಂತೆ ಮಾರಾಟ ಮಾಡುವ ಮೂಲಕ ಆದಾಯ ಗಳಿಸುತ್ತಿದ್ದಾರೆ. ಎರೆಹುಳುಗಳಿಗೂ ಬೇಡಿಕೆ ಇದೆ ಎನ್ನುತ್ತಾರೆ ಗ್ರಾಮಸ್ಥರು.


13 ಮನೆಗಳು ಗೋಬರ್ ಗ್ಯಾಸ್ ಘಟಕ ಹೊಂದಿವೆ. ಬ್ಯಾಂಕ್ ಸಬ್ಸಿಡಿ ಪಡೆದು 12 ಮನೆಗಳಲ್ಲಿ ಸೋಲಾರ್ ಅಳವಡಿಸಿಕೊಂಡಿದ್ದಾರೆ. ಮನೆಯಲ್ಲಿ ನಾಲ್ಕು ವಿದ್ಯುತ್ ದೀಪಗಳು ಯಾವಾಗಲೂ ಉರಿಯುತ್ತವೆ. ಶೇ. 90ರಷ್ಟು ಮನೆಗಳಲ್ಲಿ ಶೌಚಾಲಯವಿದೆ.

**ಹೈನುಗಾರಿಕೆ:** ನಬಾರ್ಡ್ ಜೊತೆಗೂಡಿ ಕಳೆದ ಒಂದು ವರ್ಷದಿಂದ ಕೃಷಿಯ ಜತೆಗೆ ಹೈನುಗಾರಿಕೆಗೆ ಒತ್ತು ನೀಡಿದೆ. ಹಸು ಕೊಳ್ಳಲೆಂದು 53 ಮಂದಿಗೆ ನಬಾರ್ಡ್ ವತಿಯಿಂದ ಎರಡು ಕಂತುಗಳಲ್ಲಿ ತಲಾ ಒಂದು ಲಕ್ಷ ರೂಪಾಯಿ ಸಾಲ ನೀಡಲಾಗಿದೆ. ಹಸುಗಳ ಖರೀದಿಯಿಂದಾಗಿ ನಿತ್ಯ 300 ರಿಂದ 400 ಲೀಟರ್ ಆಗುತ್ತಿದ್ದ ಹಾಲಿನ ಸಂಗ್ರಹವು 900ರ ಆಸುಪಾಸಿಗೆ ಹೆಚ್ಚಾಗಿದೆ. ದಿನನಿತ್ಯದ ಖರ್ಚು ಹಾಲಿನಲ್ಲಿಯೇ ಮುಗಿದು ಹೋಗುತ್ತಿದೆ. ಒಂದು ಹಿಡಿ ಅಜೋಲಾ ನೀಡಿದರೆ, ಒಂದು ಲೀಟರ್‌ನಷ್ಟು ಹಾಲು ಹೆಚ್ಚಾಗಿದೆ. ಹಸುಗಳ ಜತೆಗೆ ಗ್ರಾಮದಲ್ಲಿ ಕುರಿ, ಮೇಕೆ ಸಾಕಣೆಕೆಯೂ ನಡೆಯುತ್ತಿದೆ.

ಸಂಪಾದಕೀಯ ಸಹಕಾರ ವಿನಾಯಕ ಅಣ್ಣಯ್ಯ, ರಾಧಾಕೃಷ್ಣ ಹೊಳ್ಳ, ರಾಜೇಶ್ ಪದ್ಮಾರ್, ಮೊಳಹಳ್ಳಿ ಅನಿಲ್‌ಕುಮಾರ್

## ಮಹಾನ್‌ವ್ಯಕ್ತಿಗಳನ್ನು ಜಾತಿಯ ಪಂಜರದಲ್ಲಿ ಕೂಡಿಹಾಕಬೇಡಿ : ಮೋಹನ್‌ಜೀ ಭಾಗವತ್

**ಮಹಾನ್ ವ್ಯಕ್ತಿಗಳನ್ನು ಯಾವುದೇ ಜಾತಿ, ಪಂಥ, ಸಿದ್ಧಾಂತದ ಪಂಜರದಲ್ಲಿ ಕೂಡಿಹಾಕಬಾರದು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಹೇಳಿದ್ದಾರೆ.**




**ಅವರು ಇತ್ತೀಚೆಗೆ ಬಿ.ಆರ್. ಅಂಬೇಡ್ಕರ್ ಅವರ ಜೀವನ ಮತ್ತು ಬರಹಗಳ ಕುರಿತು ಯೋಜನಾ ಆಯೋಗದ ಮಾಜಿ ಸದಸ್ಯ ನರೇಂದ್ರ ಜಾಧವ್ ಅವರು ಬರೆದಿರುವ ನಾಲ್ಕು ಪುಸ್ತಕಗಳನ್ನು ಬಿಡುಗಡೆಗೊಳಿಸಿ ಮಾತನಾಡುತ್ತಿದ್ದರು. ದೇಶಕ್ಕೆ ಮತ್ತು ಅದರ ನಿರ್ಮಾಣಕ್ಕೆ ತಮ್ಮ ಇಡೀ ಜೀವನವನ್ನು ಸಮರ್ಪಿಸಿದ ಈ ದೇಶದ ಮಹಾನ್ ವ್ಯಕ್ತಿಗಳಲ್ಲಿ ಅಂಬೇಡ್ಕರ್ ಒಬ್ಬರಾಗಿದ್ದಾರೆ ಎಂದು ಅವರು ಹೇಳಿದ್ದಾರೆ. ದೇಶವನ್ನು ಒಂದಾಗಿಸಲು ಹಾಗೂ ದೇಶ ಎದುರಿಸುತ್ತಿರುವ ಗೊಂದಲ ಸಮಸ್ಯೆಗಳಿಗೆ ಉತ್ತರ ನೀಡಲು ಈ ಮಹಾಪುರುಷರು ಶ್ರಮಿಸಿದ್ದರು. ಆದರೆ ನಾವಿಂದು ಇಂತಹ ನಮ್ಮ ಮಹಾನ್ ವ್ಯಕ್ತಿಗಳನ್ನು ಜಾತಿ, ಮತ, ಭಾಷೆ ಮತ್ತು ಸಿದ್ಧಾಂತದ ಪಂಜರದೊಳಗೆ ಕೂಡಿ ಹಾಕಿದ್ದೇವೆ. ಈ ದೃಷ್ಟಿಕೋನವನ್ನು ಬದಲಿಸಿಕೊಳ್ಳುವಂತೆ ಮೋಹನ್ ಭಾಗವತ್ ಅವರು ಕರೆ ನೀಡಿದರು.**

## ಸಾಲುದ್ದದ ಸುದ್ದಿಗಳು

- ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆಯ 'ಸ್ವಚ್ಛ ವಿದ್ಯಾಲಯ' ಅಭಿಯಾನಕ್ಕೆ ರಾಜ್ಯದಲ್ಲಿ ಬಹುತೇಕ ಯಶಸ್ಸು ಲಭಿಸಿದೆ. ಯಾದಗಿರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದೆಲ್ಲ ಜಿಲ್ಲೆಗಳ ಸರ್ಕಾರಿ ಶಾಲೆಗಳಲ್ಲಿ ಶೌಚಗೃಹ ನಿರ್ಮಿಸಲಾಗಿದೆ. ಶಿಕ್ಷಣ ಇಲಾಖೆ ತಿಳಿಸಿರುವಂತೆ ರಾಜ್ಯದಲ್ಲಿರುವ 44,295 ಸರ್ಕಾರಿ ಶಾಲೆಗಳಲ್ಲೂ ಗಂಡು ಹಾಗೂ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಗೃಹ ನಿರ್ಮಿಸಲಾಗಿದೆ. ಶಾಲೆಗಳಲ್ಲಿ ಶೇ. 100 ಶೌಚಗೃಹ ಹೊಂದಿರುವ ಅಂಡಮಾನ್–ನಿಕೋಬಾರ್, ಗೋವಾ, ಹಿಮಾಚಲಪ್ರದೇಶ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕವೂ ಕೂಡ ಸೇರ್ಪಡೆಗೊಂಡಿದೆ. 2014–15 ಸಾಲಿನಲ್ಲಿ 44,295 ಶಾಲೆಗಳಿಗೂ ಶೌಚಗೃಹ ವ್ಯವಸ್ಥೆ ಕಲ್ಪಿಸಲಾಗಿದೆ. 2013–14ನೇ ಸಾಲಿನಲ್ಲಿ 44,513 ಶಾಲೆಗಳಿದ್ದವು.



- **ಭಾರತೀಯ ನೌಕಾಸೇನೆಯ ದೈತ್ಯ ಐಎನ್‌ಎಸ್ ವಿಕ್ರಮಾದಿತ್ಯ ಈಗ ಶಸ್ತ್ರ ಸನ್ನದ್ಧವಾಗಿದೆ. ಯುದ್ಧ ವಿಮಾನಗಳನ್ನು, ಹಡಗುಗಳನ್ನು ಕ್ಷಣಾರ್ಧದಲ್ಲೆ ಹೊಡೆದುರುಳಿಸುವ ಸಾಮರ್ಥ್ಯ ಪಡೆದಿದೆ. ರಷ್ಯಾದ ಗೋಶ್ಕೋವ್ ಎಂಬ ಯುದ್ಧನೌಕೆಯನ್ನು ಭಾರತ 2004ರಲ್ಲಿ 2.3 ಬಿಲಿಯನ್ ಅಮೆರಿಕನ್ ಡಾಲರ್ ಕೊಟ್ಟು ಖರೀದಿಸಿತ್ತು. 1 ಮಿಲಿಯನ್ ಡಾಲರ್ ಖರ್ಚು ಮಾಡಿ ರಷ್ಯಾದಲ್ಲೇ ನವೀಕರಿಸಲಾಗಿತ್ತು. ನಿಗದಿತ ವೇಳೆಗಿಂತ ವಿಳಂಬವಾಗಿ ರಷ್ಯಾ 2013ರ ಜುಲೈನಲ್ಲಿ ಭಾರತಕ್ಕೆ ನೌಕೆಯನ್ನು ಹಸ್ತಾಂತರಿಸಿತ್ತು. 2014ರ ಜನವರಿಯಲ್ಲಿ ಕಾರವಾರ ಐಎನ್‌ಎಸ್ ಕದಂಬ ನೌಕಾನೆಲೆ ಪ್ರವೇಶಿಸಿದ್ದ ಯುದ್ಧ ವಿಮಾನ ವಿಕ್ರಮಾದಿತ್ಯ 29 ಯುದ್ಧ ವಿಮಾನ ಹಾಗೂ 10 ಹೆಲಿಕಾಪ್ಟರ್ ನಿಲುಗಡೆಗೆ ಅವಕಾಶ ಹೊಂದಿದೆ. ಆದರೆ ಅಷ್ಟೆಲ್ಲ ಹಣ ಕೊಟ್ಟು ಖರೀದಿಸಿದರೂ ಐಎನ್‌ಎಸ್ ವಿಕ್ರಮಾದಿತ್ಯ ಸ್ವಯಂ ರಕ್ಷಣಾ ಶಸ್ತ್ರಾಸ್ತ್ರಗಳನ್ನು ಹೊಂದಿರಲಿಲ್ಲ. ಈ ಹಿನ್ನೆಲೆಯಲ್ಲಿ ವಿಕ್ರಮಾದಿತ್ಯಕ್ಕೆ ರಕ್ಷಣಾ ಶಸ್ತ್ರಾಸ್ತ್ರ ಅಳವಡಿಕೆ ಕಾರ್ಯವನ್ನು ರಷ್ಯಾ ತಂತ್ರಜ್ಞರ ಸಹಾಯದಿಂದ ಕಳೆದ ಐದು ತಿಂಗಳುಗಳಿಂದ ಕೈಗೊಳ್ಳಲಾಗಿತ್ತು.**



- ಕರ್ನಾಟಕ, ಕೇರಳ, ಗೋವಾ, ಮಹಾರಾಷ್ಟ್ರ ಸೇರಿ 6 ರಾಜ್ಯಗಳ ವ್ಯಾಪ್ತಿಯಲ್ಲಿರುವ ಪಶ್ಚಿಮಘಟ್ಟ ಪ್ರದೇಶ ಸಂರಕ್ಷಣೆಗೆ ಶಿವಮೊಗ್ಗದ ಚಕ್ರ ಪ್ರದೇಶದ 117 ಎಕರೆ ಪ್ರದೇಶದಲ್ಲಿ 'ಪಶ್ಚಿಮ ಘಟ್ಟ ಅಭಿವೃದ್ಧಿ ಕೇಂದ್ರ'ವನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಪಶ್ಚಿಮ ಘಟ್ಟ ವ್ಯಾಪ್ತಿಯನ್ನು 16,500 ಚದರ ಕಿ.ಮೀ.ಗಳಿಗೆ ನಿಗದಿಪಡಿಸುವುದು, ಗಣಿಗಾರಿಕೆಗೆ ಅವಕಾಶವಿಲ್ಲದಿದ್ದರೂ ಸ್ಥಳೀಯರ ಬೇಡಿಕೆಗೆ ಅಗತ್ಯವಾದ ಕ್ವಾರಿ, ಮರಳುಗಣಿಗಾರಿಕೆಗೆ ಅವಕಾಶ ನೀಡುವುದು, ರಾಷ್ಟ್ರೀಯ ಉದ್ಯಾನ, ಅರಣ್ಯಧಾಮ ಸೇರಿ ಪರಿಸರ ಸೂಕ್ಷ್ಮಪ್ರದೇಶಗಳನ್ನು ಪಶ್ಚಿಮಘಟ್ಟ ಅರಣ್ಯವಾಪ್ತಿಯಲ್ಲಿ ಸಂರಕ್ಷಿಸುವುದು – ಸೇರಿದಂತೆ ಡಾ.ಕಸ್ತೂರಿ ರಂಗನ್ ವರದಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಶಿಫಾರಸುಗಳನ್ನು ಕೇಂದ್ರ ಸರ್ಕಾರ ಸಂಪೂರ್ಣವಾಗಿ ಒಪ್ಪಿಕೊಂಡಿದೆ ಎಂದು ರಾಜ್ಯ ಸರ್ಕಾರ ತಿಳಿಸಿದೆ.




- **ತ್ರಿವಿಕ್ರಮ ಮಹದೇವ್ ಅವರು ಕಳೆದ 44 ವರ್ಷದಲ್ಲಿ ಬೆಂಗಳೂರು ನಗರದ 88,888 ಅನಾಥ ಶವಗಳಿಗೆ ಮುಕ್ತಿ ನೀಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ!. ರೋಗಪೀಡಿತ ತಾಯಿ ಮುದ್ದುಬಸಮ್ಮ ಅವರೊಂದಿಗೆ 44 ವರ್ಷಗಳ ಹಿಂದೆ ವಿಕ್ಟೋರಿಯ ಆಸ್ಪತ್ರೆ ಸೇರಿದ್ದ ಮಹದೇವ್ ಅಂದಿನಿಂದ ಅನಾಥ ಶವಗಳನ್ನು ಮಣ್ಣು ಮಾಡುವ ಕಾಯಕ ಮುಂದುವರಿಸಿದ್ದು, ಜುಲೈ 29ರ ವರೆಗೆ 88,888 ಅನಾಥ ಶವಗಳಿಗೆ ಮುಕ್ತಿ ಕಾಣಿಸಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿಯೇ ಕಾಲ ಕಳೆಯುವ ಮಹದೇವ್ ಪೊಲೀಸ್ ಇಲಾಖೆಗೆ 'ತ್ರಿವಿಕ್ರಮ' ಎಂದೇ ಚಿರಪರಿಚಿತ. ನಗರದ ಯಾವುದೇ ಭಾಗದಲ್ಲಿ ಅನಾಥ ಶವ ಪತ್ತೆಯಾದರೆ ಅದಕ್ಕೆ ಮುಕ್ತಿ ಕಾಣಿಸುವುದು ಮಹದೇವ್ ಕೆಲಸ. ಈ ಅಮೂಲ್ಯ ಸೇವೆ ಪರಿಗಣಿಸಿ ಅವರಿಗೆ ಕನ್ನಡ ರಾಜ್ಯೋತ್ಸವ, ಕೆಂಪೇಗೌಡ, ನಮ್ಮ ಬೆಂಗಳೂರು ಪ್ರಶಸ್ತಿ ಲಭಿಸಿವೆ. ಆಟೋದಲ್ಲಿ ಅನಾಥ ಶವ ಸಾಗಿಸುವ ಮಹದೇವ್ ಸ್ಥಿತಿ ನೋಡಿ ಐಎಎಸ್ ಅಧಿಕಾರಿ ಮದನ್‌ಗೋಪಾಲ್ ಆ್ಯಂಬುಲೆನ್ಸ್ ಕೊಡಿಸಿದ್ದರು.**



- ದೇಶದಲ್ಲಿ ಸುಮಾರು 4 ಲಕ್ಷ ಭಿಕ್ಷುಕರಿದ್ದು, ಪಶ್ಚಿಮ ಬಂಗಾಳದಲ್ಲಿ ಅತೀ ಹೆಚ್ಚು ಮತ್ತು ಲಕ್ಷದ್ವೀಪದಲ್ಲಿ ಅತೀ ಕಡಿಮೆ ಭಿಕ್ಷುಕರಿದ್ದಾರೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಪಶ್ಚಿಮ ಬಂಗಾಳ ರಾಜ್ಯದಲ್ಲಿ ಅತಿ ಹೆಚ್ಚು 81,244 ಮಂದಿ ಭಿಕ್ಷುಕರಿದ್ದಾರೆ. ಉಳಿದಂತೆ 65,835 ಭಿಕ್ಷುಕರು ಉತ್ತರ ಪ್ರದೇಶದಲ್ಲಿ, 30,218 ಭಿಕ್ಷುಕರು ಆಂಧ್ರ ಪ್ರದೇಶದಲ್ಲಿ, ಬಿಹಾರದಲ್ಲಿ 29,723 ಭಿಕ್ಷುಕರು ಮತ್ತು ಮಧ್ಯಪ್ರದೇಶದಲ್ಲಿ 28,695 ಭಿಕ್ಷುಕರಿದ್ದಾರೆ. ಭಿಕ್ಷುಕರ ಪಟ್ಟಿಯಲ್ಲಿ ಅತ್ಯಂತ ಕೆಳಗಿರುವ ಲಕ್ಷದ್ವೀಪದಲ್ಲಿ ಕೇವಲ ಇಬ್ಬರು ಭಿಕ್ಷುಕರಿದ್ದು, ಕೇಂದ್ರಾಡಳಿತ ಪ್ರದೇಶಗಳಲ್ಲಿ ಭಿಕ್ಷುಕರ ಪ್ರಮಾಣ ಸಾಕಷ್ಟು ಕಡಿಮೆ ಇದೆ, ದೆಹಲಿಯಲ್ಲಿ 2,187 ಭಿಕ್ಷುಕರಿದ್ದಾರೆ ಎಂದು ಸರ್ಕಾರ ತಿಳಿಸಿದೆ.



- **ಗಡಿ ಭದ್ರತಾ ಪಡೆಯ ಸುವರ್ಣ ಮಹೋತ್ಸವ ಹಾಗೂ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಬಿಎಸ್‌ಎಫ್ ಯೋಧರು ಗಡಿಯಲ್ಲಿ ಕೇವಲ 30 ನಿಮಿಷಗಳಲ್ಲಿ 4 ಲಕ್ಷ ಸಸಿಗಳನ್ನು ನೆಟ್ಟು ದಾಖಲೆ ನಿರ್ಮಿಸಿದ್ದಾರೆ. ಡಿಸೆಂಬರ್ 1ಕ್ಕೆ ಕೊನೆಯಾಗುವ ಬಿಎಸ್‌ಎಫ್ ಸುವರ್ಣ ಮಹೋತ್ಸವ ಹಾಗೂ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಪಾಕಿಸ್ತಾನ ಹಾಗೂ ಬಾಂಗ್ಲಾದೇಶದ ಗಡಿಯಲ್ಲಿ ಆಗಸ್ಟ್ 12ರ ಬೆಳಗ್ಗೆ 10 ಗಂಟೆಗೆ ಸಾಮೂಹಿಕವಾಗಿ ಗಿಡ ನೆಡಲಾಗಿತ್ತು. ಜಾಗತಿಕ ತಾಪಮಾನ ಏರಿಕೆ ತಡೆಗಟ್ಟುವ ಸಲುವಾಗಿ 2013, ಆಗಸ್ಟ್ 15ರಂದು ಬಿಎಸ್‌ಎಫ್ 'ಮೈ ಅರ್ಥ್ ಮೈ ಡ್ಯೂಟಿ' ಘೋಷಣೆಯೊಂದಿಗೆ ಪ್ರತಿ ವರ್ಷ ಸಾಮೂಹಿಕವಾಗಿ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದೆ. ಕಳೆದ ವರ್ಷ 3,09,000 ಸಸಿಗಳನ್ನು ನೆಡುವ ಮೂಲಕ ಯೋಧರ ಈ ಸಾಹಸ ಲಿಮ್ಕಾ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲಾಗಿತ್ತು. ಈ ವರ್ಷ ಹಿಂದಿನ ವರ್ಷದ ದಾಖಲೆಯನ್ನು ಯೋಧರು ಮುರಿದಿದ್ದಾರೆ. 2013ರಿಂದ ಈವರೆಗೆ ಬಿಎಸ್‌ಎಫ್ ಯೋಧರು 'ಮೈ ಅರ್ಥ್ ಮೈ ಡ್ಯೂಟಿ' ಮೂಲಕ ಒಂದೂವರೆ ಕೋಟಿ ಸಸಿಗಳನ್ನು ಪಾಕ್ ಹಾಗೂ ಬಾಂಗ್ಲಾ ಗಡಿಯಲ್ಲಿ ನೆಟ್ಟಿರುವುದಾಗಿ ಬಿಎಸ್‌ಎಫ್ ಅಧಿಕಾರಿಯೋರ್ವರು ತಿಳಿಸಿದ್ದಾರೆ.**

- ಸಂಜೋತಾ ಎಕ್ಸ್‌ಪ್ರೆಸ್ ಸ್ಫೋಟ ಪ್ರಕರಣದ ಆರೋಪಿ ಸ್ವಾಮಿ ಅಸೀಮಾನಂದ ಅವರಿಗೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನೀಡಿರುವ ಷರತ್ತು ಬದ್ಧ ಜಾಮೀನಿನ ವಿರುದ್ಧ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸದಿರಲು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ನಿರ್ಧರಿಸಿದೆ ಎಂದು ಕೇಂದ್ರ ಸರ್ಕಾರ ಲೋಕಸಭೆಗೆ ತಿಳಿಸಿದೆ. ಸ್ವಾಮಿ ಅಸೀಮಾನಂದ ಅವರಿಗೆ 2014ರ ಆಗಸ್ಟ್ 28ರಂದು ನೀಡಲಾಗಿದ್ದ ಜಾಮೀನಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಅಸೀಮಾನಂದ ಅವರಿಗೆ 2014ರಲ್ಲಿಯೇ ಜಾಮೀನು ನೀಡಲಾಗಿದ್ದರೂ ಅದರ ಅಧಿಕೃತ ಆದೇಶದ ಪ್ರತಿ 2015ರ ಮೇ 1ರಂದು ನೀಡಲಾಗಿತ್ತು. ಆದಾಗ್ಯೂ, ಜಾಮೀನಿನಲ್ಲಿ ಉಲ್ಲೇಖಿಸಿರುವ ಷರತ್ತುಗಳನ್ನು ಪೂರ್ಣಗೊಳಿಸಲಾಗದ್ದರಿಂದ ಅಸೀಮಾನಂದ ಈಗಲೂ ಜೈಲಿನಲ್ಲೇ ಇರುವಂತಾಗಿದೆ. 2007ರ ಫೆ. 18ರಂದು ಸಂಜೋತಾ ಎಕ್ಸ್‌ಪ್ರೆಸ್‌ನಲ್ಲಿ ಸಂಭವಿಸಿದ ಸ್ಫೋಟದಲ್ಲಿ ಶಾಮೀಲಾಗಿದ್ದ ಆರೋಪದಲ್ಲಿ ಅಸೀಮಾನಂದ ಅವರನ್ನು 2010ರ ನ. 19ರಂದು ಸಿಬಿಐ ಅಧಿಕಾರಿಗಳು ಬಂಧಿಸಿದ್ದರು. ಇದು ಹಿಂದುಗಳಿಗೆ ಭಯೋತ್ಪಾದನೆಯ ಗಂಟುಹಾಕುವ ಸಲುವಾಗಿ ಕಾಂಗ್ರೆಸ್ ನಡೆಸಿದ ವ್ಯವಸ್ಥಿತ ತಂತ್ರ ಎಂದು ಹಲವರು ಅಭಿಪ್ರಾಯಪಟ್ಟಿದ್ದರು.

- **ಲಷ್ಕರ್ ಎ ತೋಯ್ಬಾದ ಉಗ್ರ ಮೊಹಮ್ಮದ್ ನವೀದ್‌ನನ್ನು ಬಂಧಿಸಲು ಸಹಾಯ ಮಾಡಿದ ಇಬ್ಬರು ನಾಗರಿಕರನ್ನು ಜಮ್ಮು ಕಾಶ್ಮೀರ ಪೊಲೀಸ್ ಇಲಾಖೆಗೆ ನೇಮಿಸಿಕೊಳ್ಳಲಾಗಿದೆ. ಉಗ್ರನನ್ನು ಜೀವಂತವಾಗಿ ಬಂಧಿಸುವಲ್ಲಿ ಗ್ರಾಮಸ್ಥರಾದ ರಾಕೇಶ್ ಕುಮಾರ್ ಶರ್ಮ ಮತ್ತು ಬಿಕ್ರಂಜಿತ್ ಸಿಂಗ್ ತೋರಿದ ಧೈರ್ಯ ಮೆಚ್ಚುವಂಥದ್ದು. ಈ ಹಿನ್ನೆಲೆಯಲ್ಲಿ ಅವರನ್ನು ಪೊಲೀಸ್ ಹುದ್ದೆಗೆ ಆಯ್ಕೆ ಮಾಡಲಾಗಿದೆ. ಜತೆಗೆ ಶೌರ್ಯಚಕ್ರ ಪ್ರದಾನ ಮಾಡುವುದಕ್ಕೂ ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ ಎಂದು ಜಮ್ಮು–ಕಾಶ್ಮೀರದ ಪೊಲೀಸ್ ಮಹಾನಿರ್ದೇಶಕ ಕೆ. ರಾಜೇಂದ್ರ ಕುಮಾರ್ ತಿಳಿಸಿದ್ದಾರೆ.**

- ಜಮ್ಮು ಮತ್ತು ಕಾಶ್ಮೀರ ವಿಧಾನಸಭಾಧ್ಯಕ್ಷರನ್ನು ಆಹ್ವಾನಿಸದೇ ಇರುವ ಹಿನ್ನೆಲೆಯಲ್ಲಿ ಪಾಕಿಸ್ತಾನದಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಸಂಸದೀಯ ಸಭೆಯನ್ನು ಭಾರತವು ಬಹಿಷ್ಕರಿಸುವ ಸಾಧ್ಯತೆಗಳಿವೆ.. ಜಮ್ಮು ಮತ್ತು ಕಾಶ್ಮೀರ ವಿಧಾನಸಭಾಧ್ಯಕ್ಷರನ್ನು ಆಹ್ವಾನಿಸದೇ ಇದ್ದಲ್ಲಿ ಭಾರತವು ಸಭೆಯನ್ನು ಬಹಿಷ್ಕರಿಸಲಿದೆ ಎಂದು ಲೋಕಸಭಾಧ್ಯಕ್ಷೆ ಸುಮಿತ್ರಾ ಮಹಾಜನ್ ಹೇಳಿದ್ದಾರೆ. ಸೆಪ್ಟೆಂಬರ್ 30ರಿಂದ ಅಕ್ಟೋಬರ್ 8ರವರೆಗೆ ಇಸ್ಲಾಮಾಬಾದ್‌ನಲ್ಲಿ 61ನೇ ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನ (ಸಿಪಿಸಿ) ನಡೆಯಲಿದೆ. 53 ರಾಷ್ಟ್ರಗಳ 175 ಶಾಸಕರು ವಿವಿಧ ನಿಯೋಗಗಳ ಸದಸ್ಯರಾಗಿ ಈ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ. ಸಮ್ಮೇಳನಕ್ಕೆ ಪಾಕ್ ಸರ್ಕಾರ ಆತಿಥ್ಯ ನೀಡಿದೆ.



- **ಅಯೋಧ್ಯೆಯ ರಾಮ ಜನ್ಮ ಭೂಮಿಯ ಯಾತ್ರಾರ್ಥಿಗಳಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಂತೆ ಕೇಂದ್ರ ಹಾಗೂ ಉತ್ತರ ಪ್ರದೇಶ ಸರ್ಕಾರಗಳಿಗೆ ಸುಪ್ರಿಂ ಕೋರ್ಟ್ ಸೂಚಿಸಿದೆ. ಅಯೋಧ್ಯೆಗೆ ಆಗಮಿಸುವ ಭಕ್ತರು ಕುಡಿಯುವ ನೀರು, ಶೌಚಾಲಯ, ಸ್ನಾನದ ಕೋಣೆಗಳಂತಹ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದು, ಸೌಲಭ್ಯಗಳನ್ನು ಒದಗಿಸುವಂತೆ ಕೋರಿ ಬಿಜೆಪಿ ಮುಖಂಡ ಸುಬ್ರಹ್ಮಣ್ಯನ್ ಸ್ವಾಮಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ಎ.ಆರ್. ದವೆ ಹಾಗೂ ಕುರಿಯನ್ ಜೋಸೆಫ್ ಅವರನ್ನು ಒಳಗೊಂಡ ನ್ಯಾಯಪೀಠ, ವಿವಾದಿತ ಅಯೋಧ್ಯೆಯ ರಾಮ ಜನ್ಮ ಭೂಮಿಯಲ್ಲಿ ಭಕ್ತರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳುವಂತೆ ಕೇಂದ್ರ ಹಾಗೂ ಉತ್ತರ ಪ್ರದೇಶ ಸರ್ಕಾರಗಳಿಗೆ ಸೂಚಿಸಿದೆ.**

## ಕಾನೂನು ಹಾಗೂ ನಿಯಮ ಪಾಲನೆ : ಜಪಾನ್ ಮಾದರಿ

ಕಾನೂನು ಹಾಗೂ ನಿಯಮಗಳಿಲ್ಲದಿದ್ದರೆ ಸಮಾಜ ಕಾಡಿನಂತಾಗಿಬಿಡುತ್ತದೆ. ಸಂಚಾರಿ ನಿಯಮಗಳಿರಬಹುದು ಅಥವಾ ಯಾವುದೇ ಕಾನೂನಿರಬಹುದು, ಬೇರೆಯವರ್‍ಯಾರೋ ಅದನ್ನು ಪಾಲಿಸುತ್ತಿಲ್ಲವೆಂಬ ನೆಪವೊಡ್ಡಿ ನಾವೂ ಪಾಲಿಸದಿರುವುದು ಎಂದಿಗೂ ಸರಿಯಲ್ಲ. ಸಾಲಿನಲ್ಲಿ ನಿಲ್ಲುವುದು, ನಮ್ಮ ಸರದಿಗಾಗಿ ಕಾಯುವುದು ಇವೆಲ್ಲ ಸಣ್ಣ ವಿಷಯಗಳಾದರೂ ಪ್ರಜೆಗಳ ಶಿಸ್ತನ್ನು ತೋರಿಸುತ್ತವೆ. ಶಿಸ್ತಿನ ಬಗ್ಗೆ ಮಾತನಾಡುವಾಗ ನಮಗೆ ಮೊದಲು ನೆನಪಿಗೆ ಬರುವುದು ಜಪಾನ್. ಮಾರ್ಚ್ 2011ರಲ್ಲಿ ಇತಿಹಾಸದಲ್ಲೇ ಅತ್ಯಂತ ವಿನಾಶಕಾರಿ ಭೂಕಂಪ ಹಾಗೂ ನಂತರ ಸುನಾಮಿ ಜಪಾನ್‌ನನ್ನು ನಡುಗಿಸಿತು. 20,000ಕ್ಕೂ ಹೆಚ್ಚು ಜನ ಜೀವ ಕಳೆದುಕೊಂಡರು ಮತ್ತು 5,00,000ಕ್ಕೂ ಹೆಚ್ಚು ಜನ ಮನೆಗಳನ್ನು ಕಳೆದುಕೊಂಡರು. ಪರಮಾಣು ವಿದ್ಯುತ್ ಸ್ಥಾವರ ಸ್ಫೋಟಗೊಂಡಿತು ಹಾಗೂ ಈ ದುರ್ಘಟನೆಯ ಬಳಿಕ ಜಪಾನೀಯರು ವರ್ತಿಸಿದ ರೀತಿ, ಅವರು ತೋರಿದ ತಾಳ್ಮೆ ಹಾಗೂ ಶಿಸ್ತು ಜಗತ್ತನ್ನೇ ಬೆರಗುಗೊಳಿಸಿತ್ತು. ಈ ಬೃಹತ್ ದುರಂತದಿಂದ ಮೂಲಭೂತ ವ್ಯವಸ್ಥೆಗಳು ಸಂಪೂರ್ಣವಾಗಿ ನಾಶವಾಗಿದ್ದರಿಂದ ಸರ್ಕಾರವೇ ಎಲ್ಲವನ್ನು ಸರಿ ಮಾಡಲಾಗದು ಎಂಬ ಅರಿವು ಅವರಿಗಿತ್ತು. ದೇಶವನ್ನು ಯಥಾಸ್ಥಿತಿಗೆ ತರುವ ನಿಟ್ಟಿನಲ್ಲಿ ಎಲ್ಲರೂ ತಮ್ಮ ಕೈಲಾದಷ್ಟು ಶ್ರಮಿಸಿದರು. ಆಹಾರ ಪದಾರ್ಥಗಳಿಗೆ, ಕುಡಿಯುವ ನೀರಿಗೆ ಹಾಗೂ ಇಂಧನಕ್ಕೆ ಕೊರತೆ ಬಹಳವಾಗಿತ್ತು. ಆದರೂ ಪ್ರತಿ ನಾಗರೀಕನು ಸಾಲಿನಲ್ಲಿ ನಿಂತು ತನ್ನ ಸರದಿಗಾಗಿ ಕಾಯುವುದರಲ್ಲಿ ತೋರುತ್ತಿದ್ದ ಶಿಸ್ತು ನಿಜವಾಗಲೂ ಯಾರನ್ನಾದರೂ ಆಶ್ಚರ್ಯ ಪಡಿಸುವಂತಿತ್ತು. ಇಂತಹ ದುರ್ಘಟನೆಗಳ ಬಳಿಕ ಲೂಟಿಗಳು ನಡೆಯುವುದು ಪ್ರಪಂಚದ ಎಲ್ಲೆಡೆ ಸಾಮಾನ್ಯ. ಆದರೆ ಜಪಾನಿನಲ್ಲಿ ಇಂತಹ ಯಾವ ಘಟನೆಯೂ ನಡೆಯಲಿಲ್ಲ. ಪರಿಹಾರ ಕಾರ್ಯದ ವೇಳೆ ದೊರೆಯುತ್ತಿದ್ದ ಪ್ರತಿಯೊಂದು ಬೆಲೆಬಾಳುವ ವಸ್ತುವೂ ಅದರ ನಿಜವಾದ ಮಾಲೀಕರ ಕೈ ಸೇರುತ್ತಿತ್ತು.

पुंगव PUNGAVA


# 74, Ranga Rao Road,
Shankarapuram, Bangalore - 560 004.
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17

1-9-2015



# ಸಮಾಜ ಸಮರ್ಪಿತ ಜೀವನ



**ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಲವು ಜವಾಬ್ದಾರಿಗಳನ್ನು ನಿರ್ವಹಿಸಿ, ಲಕ್ಷಾಂತರ ಕಾರ್ಯಕರ್ತರಿಗೆ ಸ್ಫೂರ್ತಿಯ ಸೆಲೆಯಾಗಿದ್ದ ಆರೆಸ್ಸೆಸ್‌ನ ಹಿರಿಯ ಪ್ರಚಾರಕ ನ. ಕೃಷ್ಣಪ್ಪ (83) ಅವರು ಇನ್ನು ನೆನಪು ಮಾತ್ರ. ನೀತಿ ಶಿಕ್ಷಣ ಹಾಗೂ ಕುಟುಂಬ ಪದ್ಧತಿಯ ಮೌಲ್ಯಗಳ ಪ್ರತಿಪಾದಕರಾಗಿದ್ದ ಅವರು ಈ ನಿಟ್ಟಿನಲ್ಲಿ ಅನೇಕ ಹೊಸ ಪ್ರಯೋಗಗಳನ್ನು ನಡೆಸಿದ್ದರು.**

1954 ರಿಂದ 61 ವರ್ಷಗಳ ಕಾಲ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಪ್ರಚಾರಕರಾಗಿ ಸೇವೆಸಲ್ಲಿಸಿದ ಸಮಾಜಸೇವೆಗಾಗಿ ಸಮರ್ಪಿತ ನ. ಕೃಷ್ಣಪ್ಪ (83) ಅವರು ಆಗಸ್ಟ್ 10ರಂದು ಇಹಲೋಕ ತ್ಯಜಿಸಿದರು. ಮೂಲತಃ ಮೈಸೂರಿನವರಾದ ನ. ಕೃಷ್ಣಪ್ಪನವರು ಸುಮಾರು 28 ವರ್ಷಗಳಿಂದ ಕ್ಯಾನ್ಸರ್ ವಿರುದ್ಧ ಅಂತಃಸ್ಥೈರ್ಯದಿಂದ ಸೆಣಸಾಡುತ್ತಾ ಸಂಘ ಕಾರ್ಯ ನಡೆಸುತ್ತಿದ್ದರು.

1932ರಲ್ಲಿ ನರಸಿಂಹಯ್ಯ ಹಾಗೂ ಸಾವಿತ್ರಿಯಮ್ಮ ದಂಪತಿಯ ಎರಡನೇ ಮಗನಾಗಿ ಮೈಸೂರಿನಲ್ಲಿ ಜನಿಸಿದ ಅವರು ಮೈಸೂರಿನಲ್ಲಿ ಪದವಿ ಶಿಕ್ಷಣ (ಸಂಸ್ಕೃತ) ಪಡೆದರು. ಸಂಪೂರ್ಣ ಸಮಾಜದ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಸಲುವಾಗಿ 1954 ರಿಂದ ಮನೆ ತೊರೆದು ಆರೆಸ್ಸೆಸ್‌ನ ಪ್ರಚಾರಕರಾಗಿ ಹೊರಟರು. ಬಳಿಕ ಶಿವಮೊಗ್ಗ, ಮಂಗಳೂರು, ಬೆಂಗಳೂರು ಗ್ರಾಮಾಂತರ ಜಿಲ್ಲಾ, ತುಮಕೂರು ವಿಭಾಗ, ಮಂಗಳೂರು ವಿಭಾಗ (ಬಳ್ಳಾರಿ ವರೆಗೆ ವ್ಯಾಪಿಸಿತ್ತು) ಪ್ರಚಾರಕರಾಗಿ ಸೇವೆ ಸಲ್ಲಿಸಿದರು. ತುರ್ತು ಪರಿಸ್ಥಿತಿ ವಿರುದ್ಧ ಚಳುವಳಿಯಲ್ಲಿ ಪಾಲ್ಗೊಂಡಿದ್ದಕ್ಕಾಗಿ ಅವರು ಮಂಗಳೂರು ಜೈಲಿನಲ್ಲಿ ಸೆರೆವಾಸ ಅನುಭವಿಸಿದರು.

1978ರಲ್ಲಿ ಪ್ರಾಂತ ಬೌದ್ಧಿಕ ಪ್ರಮುಖರಾಗಿ ಮಾರ್ಗದರ್ಶನ ಮಾಡಿದ ಅವರು, 1980ರಲ್ಲಿ ಕರ್ನಾಟಕ ಪ್ರಾಂತ ಪ್ರಚಾರಕರಾದರು. ಕ್ಷೇತ್ರೀಯ ಪ್ರಚಾರಕ (1989ರಲ್ಲಿ), ಅಖಿಲ ಭಾರತೀಯ ಕಾರ್ಯಕಾರಿಣಿ ಸದಸ್ಯ(2004–2014)ರಾಗಿ ಕಾರ್ಯನಿರ್ವಹಿಸಿದ ಅವರು ಸಂಘ ಕಾರ್ಯಕ್ಕಾಗಿ ದೇಶಾದ್ಯಂತ ಪ್ರವಾಸ ಕೈಗೊಂಡು ಸಾವಿರಾರು ಕಾರ್ಯಕರ್ತರನ್ನು ರೂಪಿಸಿದ್ದಾರೆ.

'ವೇದವಿಜ್ಞಾನ ಗುರುಕುಲ', 'ಪ್ರಭೋದಿನಿ ಗುರುಕುಲ', 'ಮೈತ್ರೇಯಿ ಗುರುಕುಲ' ಸಂಘಟನೆಗಳ ಹಾಗೂ ಕನ್ನಡದ ಮಾಸಪತ್ರಿಕೆ 'ಅಸೀಮಾ' ಪತ್ರಿಕೆಯ ಹುಟ್ಟು ಮತ್ತು ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರು ವೇದ ಸಂಬಂಧಿತ ತತ್ತ್ವಶಾಸ್ತ್ರಗಳ ಬಗ್ಗೆ ಆಳವಾದ ಜ್ಞಾನ ಹೊಂದಿದ್ದರು.

## ಆತ್ಮಶ್ರಾದ್ಧ–ದೇಹದಾನ

ನಿಧನಾನಂತರ ಮಾಡುವ ಅಂತಿಮ ವಿಧಿ–ವಿಧಾನಗಳನ್ನು ಬದುಕಿದ್ದಾಗಲೇ ಮಾಡುವ ಕ್ರಿಯೆ ಆತ್ಮಶ್ರಾದ್ಧ. ಕೃಷ್ಣಪ್ಪನವರು ತಾವು ಬದುಕಿರುವಾಗಲೇ ಉತ್ತರಾಖಂಡದ ಬದ್ರಿನಾಥದಲ್ಲಿ ಈ ವಿಧಿಮಾಡಿಕೊಂಡಿದ್ದರು. ಎರಡನೇ ಸರಸಂಘಚಾಲಕ ಶ್ರೀಗುರೂಜಿ ಗೋಳವಲ್ಕರ್ ಈ ಕಾರ್ಯಕ್ಕೆ ಪ್ರೇರಣೆಯಾಗಿದ್ದರು. ಮರಣಾನಂತರ ನೇತ್ರದಾನ ಹಾಗೂ ದೇಹದಾನ ಮಾಡುವಂತೆ ಅವರು ಸೂಚಿಸಿದ್ದರು. ಅವರ ಆಶಯದಂತೆ ನೇತ್ರದಾನ ಮಾಡಲಾಯಿತು ಹಾಗೂ ಬೆಂಗಳೂರಿನ ಕಿಮ್ಸ್ ವೈದ್ಯಕೀಯ ಕಾಲೇಜಿಗೆ ದೇಹದಾನ ಮಾಡಲಾಯಿತು. ಹೀಗೆ ಬದುಕಿರುವಾಗ ಮತ್ತು ನಂತರವೂ ಸರ್ವಸ್ವವನ್ನೂ ತ್ಯಾಗ ಮಾಡಿದ ಆದರ್ಶ ವ್ಯಕ್ತಿ ಅವರು.

| | |
|---|---|
| 1932 | ಜನನ |
| 1942 | ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕ |
| 1954 | ಆರೆಸ್ಸೆಸ್ ಪ್ರಚಾರಕರಾಗಿ ಸೇರ್ಪಡೆ, ಚಾಮರಾಜನಗರ ತಾಲೂಕು ಪ್ರಚಾರಕ |
| 1955–56 | ಶಿವಮೊಗ್ಗ ಜಿಲ್ಲಾ ಪ್ರಚಾರಕ |
| 1959 | ಮಂಗಳೂರು ಜಿಲ್ಲಾ ಪ್ರಚಾರಕ |
| 1960–1962 | ಬೆಂಗಳೂರು ಗ್ರಾಮಾಂತರ ಜಿಲ್ಲಾ ಪ್ರಚಾರಕ |
| 1962 | ತುಮಕೂರು ವಿಭಾಗ ಪ್ರಚಾರಕ |
| 1966 | ಮಂಗಳೂರು ವಿಭಾಗ ಪ್ರಚಾರಕ |
| 1978 | ಕರ್ನಾಟಕ ಪ್ರಾಂತ ಬೌದ್ಧಿಕ ಪ್ರಮುಖ್ |
| 1980 | ಕರ್ನಾಟಕ ಪ್ರಾಂತ ಪ್ರಚಾರಕ |
| 1989 | ಕ್ಷೇತ್ರೀಯ ಪ್ರಚಾರಕ (ಕರ್ನಾಟಕ, ಕೇರಳ, ತಮಿಳುನಾಡು ರಾಜ್ಯ ವ್ಯಾಪ್ತಿ) |
| 2004–2014 | ಅಖಿಲ ಭಾರತೀಯ ಕಾರ್ಯಕಾರಿಣಿ ಸದಸ್ಯ |
| 2014ರ | ಮಾರ್ಚ್‌ನಿಂದ ಆರೋಗ್ಯ ಹದಗೆಟ್ಟ ಕಾರಣದಿಂದ ಕೆಲ ತಿಂಗಳುಗಳ ಕಾಲ ಚಿಕಿತ್ಸೆ |

## ಮಹನೀಯರು ಕಂಡಂತೆ...

### ಗಾಂಧಿಯಂತಹ ಅತ್ಯಂತ ಸರಳ ಬದುಕನ್ನು ಬದುಕಿದ ಮನುಷ್ಯ

ನಮ್ಮ ತಂದೆ ಕಾಂಗ್ರೆಸ್‌ನವರು. ತುಂಬಾ ಶಿಸ್ತಿನ ಮನುಷ್ಯರು. ಹಳೆಯ ಕಾಂಗ್ರೆಸ್‌ನವರಿಗೆ ಸಂಘದವರನ್ನು ಕಂಡರೆ ಕೋಪವಿರುತ್ತಿದ್ದ ದಿನಗಳು. ಅಂಥಾ ನಮ್ಮ ಮನೆಯಲ್ಲಿ ಕೂಡ ನಿಮ್ಮನ್ನು ಕಂಡರೆ ನಮ್ಮ ಮನೆಯ ಎಲ್ಲರಿಗೂ ಎಷ್ಟು ಪ್ರೀತಿ ವಿಶ್ವಾಸ... ನೀವು ನಂಬಿದ ಸಂಘಟನೆಯ ಸೈದ್ಧಾಂತಿಕ ತತ್ವಗಳಿಗೆ ನಾನು ಬಹುದೂರ ಹೋಗಿ ಸಮಾಜವಾದಿ ಪಕ್ಷಕ್ಕೆ ಸೇರಿದಾಗಲೂ ನಿಮ್ಮ ಬಗೆಗಿನ ವೈಯಕ್ತಿಕ ಗೌರವ ನನಗೆ ಕಿಂಚಿತ್ತೂ ಕಡಿಮೆಯಾಗಲಿಲ್ಲ. ಅಂಥ ದೊಡ್ಡ ವ್ಯಕ್ತಿ ನೀವು. ಆಗ ನಿಮಗೆ 28–30 ವಯಸ್ಸು ಅನಿಸುತ್ತೆ. ದೇಹದ ಮತ್ತು ಬದುಕಿನ ಆಕರ್ಷಣೆಯ ವಿರುದ್ಧ ಹೋರಾಟ ಮಾಡುವುದು ಸುಲಭದ ಮಾತಲ್ಲ. ಆದರೆ ಆ ವಯಸ್ಸಿನಲ್ಲಿ ನೀವು ಎಂಥ ನಿಸ್ಪೃಹ ಬದುಕು ಬದುಕುತ್ತಿದ್ದಿರಿ ಎಂದು ಅನೇಕ ವರ್ಷಗಳ ನಂತರ ನನಗೆ ಅರಿವಾಗತೊಡಗಿತು. ಈ ಸಮಾಜಕ್ಕೆ ನನ್ನ ಬದುಕು ಅರ್ಪಣೆ ಎಂದು ಆತ್ಮವಿಶ್ವಾಸದ ನಗೆ ಬೀರುತ್ತಾ ಹೇಳುತ್ತಿದ್ದಿರಿ. ನಿಮ್ಮ ಔಷಧಿಗಾಗಿ ಕೊಂಡುಕೊಂಡ ಆಗಿನ ಮೂರು ಪೈಸೆಯ ಒಂದು ನಿಂಬೆಹಣ್ಣಿನ ಲೆಕ್ಕ ಕೂಡ ಬರೆದುಕೊಳ್ಳುತ್ತಿದ್ದಿರಿ. ಅದನ್ನು ನಿಮ್ಮ ಕೇಂದ್ರ ಶಾಖೆಗೆ ಕಳುಹಿಸುತ್ತಿದ್ದರೋ ಏನೋ ಗೊತ್ತಿಲ್ಲ. ಅಷ್ಟು ನಿಸ್ಪೃಹ ಮನುಷ್ಯರು ನೀವು. ನಾನು ಮೆಚ್ಚುವ ಗಾಂಧಿಯಂತಹ ಅತ್ಯಂತ ಸರಳ ಬದುಕನ್ನು ಬದುಕಿದ ಮನುಷ್ಯ ನೀವು.

ಕೃಷ್ಣಪ್ಪನವರೆ, ನಿಮ್ಮ ಬುದ್ಧಿಶಕ್ತಿಗೆ, ನಿಮ್ಮ ವಿದ್ಯಾಭ್ಯಾಸಕ್ಕೆ, ನಿಮ್ಮ ಚಮಕಿಗೆ ನೀವು ಸುಲಭವಾಗಿ ಐಎಎಸ್ ಮಾಡಿ ದೊಡ್ಡ ಅಧಿಕಾರಿಯಾಗಬಹುದಿತ್ತು. ಏನು ಬೇಕಾದರೂ ಆಗಬಹುದಿತ್ತು. ಆದರೆ ನೀವು ಅದೆಲ್ಲವನ್ನು ಧಿಕ್ಕರಿಸಿ ಸಂಘಟನೆಗೆ ನಿಮ್ಮನ್ನು ಸಮರ್ಪಿಸಿಕೊಂಡಿರಿ. ನಿಮ್ಮ ಸಂಘಟನೆಯ ಬಗ್ಗೆ ನನ್ನದೇ ಆದ ವಿರೋಧವಿದೆ... ಆಳದ ಸಿಟ್ಟು ಇದೆ. ನಾನು ಸೈದ್ಧಾಂತಿಕವಾಗಿ ಬೇರೆದಾರಿ ಹಿಡಿದರೂ ಕೂಡ ಇಂದಿಗೂ ನನ್ನ ಮನಸ್ಸಿನಲ್ಲಿ ಮತ್ತು ಹೃದಯಲ್ಲಿ ಅತ್ಯಂತ ಆತ್ಮೀಯ ಗುರುವಿನಂತೆ ನಿಂತವರಲ್ಲಿ ನೀವು ಮೊದಲಿಗರು... ನಿಮ್ಮ ಬಗ್ಗೆ ನನಗೆ ತೀರಿಸಲಾಗದ ಋಣವಿದೆ... ಇಡೀ ಬದುಕಿನಲ್ಲಿ ಇಷ್ಟೊಂದು ಮಾನವೀಯತೆಯನ್ನು, ಆತ್ಮೀಯತೆಯನ್ನು ಇಟ್ಟುಕೊಂಡ ಮನುಷ್ಯರನ್ನು ನಾನು ನೋಡಿದ್ದು ಕಡಿಮೆ. ನೀವು, ನಿಮ್ಮ ಬದುಕು ಸಹೃದಯರಿಗೆ ಒಂದು ಪಠ್ಯಪುಸ್ತಕ.

**– ಟಿ.ಎನ್. ಸೀತಾರಾಮ್, ಕಿರುತೆರೆ ನಿರ್ದೇಶಕ**

"ಜೀವನದಲ್ಲಿ ಕರ್ಮಠತೆ, ಆಚರಣೆಯ ಶುದ್ಧತೆ ಹಾಗೂ ಸಂಘಟನೆಗಾಗಿ ಸಂಪೂರ್ಣ ಸಮರ್ಪಣೆ – ಇದು ಕೃಷ್ಣಪ್ಪನವರ ಸಮರ್ಪಿತ ಬದುಕಿನಿಂದ ನಮಗೆಲ್ಲರಿಗೂ ದೊರಕಿರುವ ಶ್ರೇಷ್ಠ ಸಂದೇಶ. ಸಮಾಜಪರಿವರ್ತನೆಗಾಗಿ ಸ್ಪಷ್ಟ ದೃಷ್ಟಿ, ಪರಿವರ್ತನೆ, ದಿಶೆ ಹಾಗೂ ಪ್ರೇರಣೆ ನೀಡುತ್ತಲೇ ಸಾವಿರಾರು ಕಾರ್ಯಕರ್ತರು ಹಾಗೂ ಕುಟುಂಬಗಳಲ್ಲಿ ಜೀವನ ಮೌಲ್ಯಗಳನ್ನು ಬಿತ್ತಿದ ಕೃಷ್ಣಪ್ಪನವರು ನಮ್ಮೆಲ್ಲರ ನೆನಪಿನಲ್ಲಿ ಚಿರಸ್ಥಾಯಿಯಾಗಿ ಉಳಿಯುತ್ತಾರೆ. ಕಳೆದ ಹಲವು ವರ್ಷಗಳಿಂದ ಭಯಾನಕ ರೋಗದೊಂದಿಗೆ ಸೆಣಸುತ್ತಾ, ಅದರ ನೋವನ್ನು ಸಹಿಸುತ್ತಾ, ಪ್ರಸನ್ನತೆಯಿಂದ ಬದುಕಿದ ಈ ಮಹಾಯೋಗಿಗೆ ಶತಶತ ಪ್ರಣಾಮಗಳು"

**– ಮೋಹನ್ ಭಾಗವತ್, ಆರೆಸ್ಸೆಸ್ ಸರಸಂಘಚಾಲಕ**

"ಕೃಷ್ಣಪ್ಪನವರ ವೈಶಿಷ್ಟ್ಯವೆಂದರೆ, ಸಂಘ ಹಾಗೂ ಹಿಂದೂ ವಿರೋಧಿಗಳನ್ನು, ತಾವು ಅತ್ಯಂತ ಆಧುನಿಕರು, ವಿಚಾರವಾದಿಗಳು, ನಾಸ್ತಿಕರು ಎಂದುಕೊಳ್ಳುತ್ತಿದ್ದವರನ್ನು ಕೂಡ ತಮ್ಮ ಪ್ರೀತಿ, ಆತ್ಮೀಯತೆ, ತಾಳ್ಮೆ, ವೈಚಾರಿಕ ಔನ್ನತ್ಯದಿಂದ ಸಂಘದ ಅಭಿಮಾನಿಗಳನ್ನಾಗಿ ಮಾಡುವ ಛಲ ಅವರಲ್ಲಿತ್ತು" **– ಹೆಬ್ರಿ ಬಾಲಕೃಷ್ಣ ಮಲ್ಯ**

## ಡಾ. ಎಸ್.ಎಲ್. ಭೈರಪ್ಪ ಕಂಡಂತೆ...

... ನ. ಕೃಷ್ಣಪ್ಪನವರು ನನಗಿಂತ 3 ವರ್ಷಕ್ಕೆ ಹಿರಿಯರು. ನಾನು ಸೀನಿಯರ್ ಇಂಟರ್ ಮೀಡಿಯೆಟ್‌ನಲ್ಲಿದ್ದಾಗ ಅವರು ಮೂರನೆ ವರ್ಷದ ಸಂಸ್ಕೃತ ಆನರ್ಸ್‌ನಲ್ಲಿದ್ದರು. ನನ್ನಂತೆಯೇ ವಾರದಲ್ಲಿ ಕೆಲವು ದಿನ ಅನಾಥಾಲಯಕ್ಕೆ ಊಟಕ್ಕೆ ಬರುತ್ತಿದ್ದರು. ಖಾಕಿ ನಿಕ್ಕರ್, ಬಿಳಿ ಶರಟು, ತಲೆಗೆ ಕರಿಟೋಪಿ, ಸೈಕಲ್ ಹತ್ತಿ ಜರ್ ಎಂದು ಬಂದಿಳಿಯುತ್ತಿದ್ದರು. ಹ್ಯಾಂಡಲಿನ ಚೀಲದಿಂದ ಒಂದು ಲುಂಗಿ ತೆಗೆದು ಉಟ್ಟು ಕೈ ಕಾಲು ತೊಳೆದು ಸರಸರನೆ ಊಟಮಾಡಿ ಓಡಿಬಿಡುತ್ತಿದ್ದರು. ಬೆಳಗಿನ ಜಾವದಿಂದ ಸಂಘ ಸ್ಥಾನಗಳ ಕೆಲಸ. ಹತ್ತು ಗಂಟೆಯಿಂದ ಕಾಲೇಜು, ಸಂಜೆ ಮತ್ತೆ ಸ್ವಯಂಸೇವಕ ಸಂಘದ ಕೆಲಸ. ಯಾವಾಗ ಓದುತ್ತಿದ್ದರೆಂಬುದು ಗೊತ್ತಾಗುತ್ತಿರಲಿಲ್ಲ. ಆದರೆ ಅವರ ಓದಿನವ್ಯಾಪ್ತಿ ಆಗಲೇ ಬಲು ವಿಶಾಲವಾಗಿತ್ತು. ಸಂಸ್ಕೃತದಲ್ಲಿ ಕಾಲೇಜಿನ ಪಠ್ಯದ ನಿರೀಕ್ಷಣೆಗಿಂತ ಬಹು ಹೆಚ್ಚು ಓದಿದ್ದರು. ಅದಲ್ಲದೆ ಭಾರತೀಯ ಇತಿಹಾಸ, ಕಲೆ, ಕನ್ನಡ ಸಾಹಿತ್ಯ ಮೊದಲಾದುವುಗಳಲ್ಲಿಯೂ ಸಾಕಷ್ಟು ಪ್ರವೇಶ ಗಳಿಸಿದ್ದರು. ಆನರ್ಸ್ ಆದ ಮೇಲೆ ಮುಂದೆ ಎಂ.ಎ., ಓದಲಿಲ್ಲ. ಸಂಪೂರ್ಣವಾಗಿ ಸ್ವಯಂಸೇವಕ ಸಂಘದ ಕೆಲಸಕ್ಕೆ ಒಪ್ಪಿಸಿಕೊಂಡರು. ಅಧ್ಯಯನ ಅಧ್ಯಾಪನದ ಮಾರ್ಗ ಹಿಡಿದಿದ್ದರೆ ಇಂದು ಸಂಸ್ಕೃತದಲ್ಲಿ ಅಥವಾ ಭಾರತೀಯ ಅಧ್ಯಯನದಲ್ಲಿ ಒಬ್ಬ ಪ್ರಕಾಂಡ ಪಂಡಿತರಾಗಿ ಬೆಳೆಯುತ್ತಿದ್ದರು...

ಅವರ ಓದು ಮತ್ತು ಮೇಧಾಶಕ್ತಿಯ ಮುಂದೆ ಆರಂಭದಲ್ಲಿ ನಮ್ಮದು ಗುರುಶಿಷ್ಯ ಸಂಬಂಧದಂತೆ ಇತ್ತು. ಆದರೆ ಕೃಷ್ಣಪ್ಪ ಮೂಲತಃ ಸ್ನೇಹಶೀಲ, ನಿಗರ್ವಿ. ಒಂದು ವಾರದಲ್ಲಿ ನನ್ನನ್ನು ಏಕವಚನದಲ್ಲಿ ಕರೆಯಲು ಆರಂಭಿಸಿದ್ದಲ್ಲದೆ ನಾನೂ ಏಕವಚನದಲ್ಲಿ ಕರೆಯುವಂತೆ ಒತ್ತಾಯ ಮಾಡಿದ. ಇಂದಿಗೂ ನಾನು ಅವನನ್ನು ಕೃಷ್ಣ ಎಂದು ಕರೆಯುತ್ತೇನೆ. ಅವನಿಗೆ ಮೈಸೂರು ವಿಶ್ವವಿದ್ಯಾಲಯದ ಗ್ರಂಥಭಂಡಾರದಿಂದ ಐದು ಪುಸ್ತಕ ಕೊಡುತ್ತಿದ್ದರು. ಮಹಾರಾಜಾ ಕಾಲೇಜು ಗ್ರಂಥಭಂಡಾರದಿಂದ ನಾಲ್ಕು. ನನ್ನನ್ನು ಕರೆದುಕೊಂಡು ಹೋಗಿ ಕೇಳಿದಷ್ಟು ಪುಸ್ತಕ ಕೊಡಿಸುತ್ತಿದ್ದ. ನಾನು ಇಂಟರ್ ಮೀಡಿಯೆಟ್‌ನಲ್ಲಿ ಇತಿಹಾಸ, ಅರ್ಥಶಾಸ್ತ್ರ, ತರ್ಕಶಾಸ್ತಗಳನ್ನು ತೆಗೆದುಕೊಂಡಿದ್ದೆ. ಶಾರದಾವಿಲಾಸದ ಎಸ್.ಆರ್. ಅವರಿಂದ ಇತಿಹಾಸದಲ್ಲಿ ಪ್ರೀತಿ ಬೆಳೆದಿತ್ತು. ಕಾಲೇಜಿನ ಲೆಕ್ಚರರ್‌ಗಳ ಗೋಡೆಗಳಿಗೆ ಹೇಳುತ್ತಿದ್ದರೋ ಮೇಲ್ಛಾವಣಿಗೆ ಬೊಗಳುತ್ತಿದ್ದರೋ ಎಂಬ ಅವರಿಗೇ ತಿಳಿಯದ ರೀತಿಯ ಲೆಕ್ಚರ್‌ಗಳನ್ನು ಕೇಳಿ ಆ ವಿಷಯದಲ್ಲಿ ಬೇಸರ ಹುಟ್ಟಿತ್ತು. ಕೃಷ್ಣನಿಂದ ಮತ್ತೆ ಪ್ರೀತಿ ಚಿಗುರಿತು. ಭಾರತೀಯ ಇತಿಹಾಸಕ್ಕೆ ಕೃಷ್ಣ ಓದಿದ್ದ ಪುಸ್ತಕಗಳನ್ನೆಲ್ಲ ನಾನು ಓದಿದೆ. ಮಜುಮ್‌ದಾರ್ ದತ್ತರಾಯ್ ಚೌಧರಿಯವರ ಮೂರು ಗ್ರಂಥಕರ್ತರ ಇತಿಹಾಸ ಎಂಬ ಪ್ರಸಿದ್ಧ ಪುಸ್ತಕ, ಜೊತೆಗೆ ರಾಲಿನ್‌ಸನ್‌ನ ಇತಿಹಾಸ, ಸ್ಮಿತ್ ಇತಿಹಾಸ, ವ್ಹೀಲರನ ಸಿಂಧೂ ಸಂಸ್ಕೃತಿ, ಲೇನ್ ಪೂಲನ ಮೊಘಲ್ ಇತಿಹಾಸ ಹೀಗೆ ಈಗಿನ ಎಂ.ಎ. ಹುಡುಗರು ಓದದಿರುವಷ್ಟನ್ನೂ ಕೃಷ್ಣ ನನಗೆ ಓದಿಸಿದ. ನಡುವೆ ಚರ್ಚೆ, ಪ್ರಶ್ನೆಗಳಿಂದ ನನ್ನ ಗ್ರಹಿಕೆಯನ್ನು ಸ್ಫುಟಗೊಳಿಸಿದ. ಗ್ರೀಕ್ ಮತ್ತು ರೋಮ್ ಇತಿಹಾಸಗಳಿಗೂ ಬ್ಯೂರಿ, ವೆಲ್ಸ್ ಮೊದಲಾದವರ ಸಂಪುಟಗಳನ್ನೆಲ್ಲ ಓದುವಂತೆ ಸೂಚಿಸಿ ಪುಸ್ತಕ ಒದಗಿಸಿಕೊಟ್ಟ. ನಾನು ಓದುತ್ತಿದ್ದ ತರ್ಕಶಾಸ್ತ್ರಕ್ಕೆ ಪೂರಕವಾಗಿ ಭಾರತೀಯ ತರ್ಕಶಾಸ್ತ್ರದ ರೂಪರೇಷೆಗಳನ್ನೂ ಹೇಳಿದ. ಅರಿಸ್ಟಾಟಲನ ಸಿಲಾಜಿಸಮ್‌ಗೂ ಭಾರತೀಯ ಸಿಲಾಜಿಸಮ್‌ಗೂ ಇರುವ ವ್ಯತ್ಯಾಸಗಳು, ಹೀಗೆ ಇಂಟರ್ ವಿದ್ಯಾರ್ಥಿಗೆ ಪರೀಕ್ಷೆಯ ದೃಷ್ಟಿಯಿಂದ ಬೇಡವೇ ಬೇಡವಾದ ಆನರ್ಸ್‌ಮಟ್ಟದ ವಿಷಯಗಳನ್ನೆಲ್ಲ ವಿವರಿಸುತ್ತಿದ್ದ. ನನ್ನೊಡನೆ ಚರ್ಚಿಸಲು, ನನಗೆ ಮಾರ್ಗದರ್ಶನ ಮಾಡಲು, ಪುಸ್ತಕಗಳನ್ನು ಕೊಡಿಸಲು, ತಾನೇ ಹೊತ್ತು ತಂದುಕೊಡಲು ಅವನಿಗೆ ಎಲ್ಲಿಲ್ಲದ ಉತ್ಸಾಹ. ಎಲ್ಲರಿಗೂ ಸಹಾಯ ಮಾಡುವುದು ಅವನ ಸಹಜಸ್ವಭಾವ....

**(ಡಾ. ಎಸ್.ಎಲ್. ಭೈರಪ್ಪನವರ ಆತ್ಮವೃತ್ತಾಂತ 'ಭಿತ್ತಿ'ಯಲ್ಲಿ)**

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04.
ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.
ಚಂದಾ ವಿವರ ಮತ್ತು ವಿಳಾಸ ಬದಲಾವಣೆಗಾಗಿ : 97391 83021
ಸಂಪಾದಕೀಯ : 9731264009